ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಸ್ವಾತಂತ್ರ್ಯ ಅಮೃತ ಮಹೋತ್ಸವ ಪುಸ್ತಕ ಮಾಲೆ

## ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

# ಚಿತ್ರದುರ್ಗ


ಪ್ರಧಾನ ಸಂಪಾದಕರು

**ಡಾ. ಬಿ. ವಿ. ವಸಂತಕುಮಾರ್**

ಸಂಪಾದಕರು

**ಡಾ. ಎಸ್. ಜಿ. ರಾಮದಾಸ ರೆಡ್ಡಿ**

ಲೇಖಕರು

**ಡಾ. ಬಿ. ರಾಜಶೇಖರಪ್ಪ**



**ಕರ್ನಾಟಕ ಸಾಹಿತ್ಯ ಅಕಾಡೆಮಿ**

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–೫೬೦ ೦೦೨

ದೂರವಾಣಿ: ೦೮೦–೨೨೨೧೧೭೩೦ / ೨೨೧೦೬೪೬೦

www.karnatakasahithyaacademy.org

ಇ–ಮೇಲ್: sahithya.academy@gmail.com

**CHITRADURGA:** An Introducing Book on the Places in Karnataka that Played a Major Role in the Freedom Struggle, Written by Dr. B. Rajashekarappa, Published by Kariyappa N., Registrar, Karnataka Sahithya Academy, Kannada Bhavana, J.C. Road, Bengaluru-560002

ಹಕ್ಕು: ಕರ್ನಾಟಕ ಸಾಹಿತ್ಯ ಅಕಾಡೆಮಿ

**ಪ್ರಧಾನ ಸಂಪಾದಕರು**
ಡಾ. ಬಿ.ವಿ. ವಸಂತಕುಮಾರ್
ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ

**ಸಂಪಾದಕ ಮಂಡಳಿ**
ಡಾ. ಎಸ್. ಜಿ. ರಾಮದಾಸ ರೆಡ್ಡಿ
ಡಾ. ಮೃತ್ಯುಂಜಯ ರುಮಾಲೆ
ಶ್ರೀ ನರೇಂದ್ರಕುಮಾರ್ ಎಸ್.ಎಸ್.
ಡಾ. ಪ್ರಕಾಶ ಗ. ಖಾಡೆ
ಶ್ರೀಮತಿ ಕೋಡಿಬೆಟ್ಟು ರಾಜಲಕ್ಷ್ಮಿ

**ಲೇಖಕರು**
ಡಾ. ಬಿ. ರಾಜಶೇಖರಪ್ಪ

ಮೊದಲ ಮುದ್ರಣ: ೨೦೨೨
ಪ್ರತಿಗಳು: ೧೦೦೦
ಬೆಲೆ: ರೂ. ೩೦/-
ಪುಟ: ೬೪

ಮುಖಪುಟ ಚಿತ್ರ: ಮುರಳೀಧರ ವಿ. ರಾಥೋಡ್


ಪ್ರಕಾಶಕರು:
ಕರಿಯಪ್ಪ ಎನ್., ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಕರು
**ರಶ್ಮಿ ಪ್ರಿಂಟರ್ಸ್**
ಸುಧಾಮನಗರ, ಬೆಂಗಳೂರು
ಮೊ: ೯೯೦೧೯೧೬೩೮೧

**ಬಸವರಾಜ ಬೊಮ್ಮಾಯಿ**
ಮುಖ್ಯಮಂತ್ರಿ

ಸ್ವಾತಂತ್ರ್ಯದ ಅಮೃತಮಹೋತ್ಸವ

ವಿಧಾನಸೌಧ
ಬೆಂಗಳೂರು–560 001



## ಶುಭ ಸಂದೇಶ

ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭದಲ್ಲಿ ದೇಶದಾದ್ಯಂತ ದೇಶಪ್ರೇಮವನ್ನು ಬೆಳೆಸುವ ಸಾವಿರಾರು ಕಾರ್ಯಕ್ರಮಗಳು ನಡೆಯುತ್ತಿರುವ ಹೊತ್ತಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕರ್ನಾಟಕದ ೩೧ ಜಿಲ್ಲೆಗಳಲ್ಲಿ ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ೭೫ ಸ್ಥಳಗಳನ್ನು ಗುರುತಿಸಿ, ೭೫ ಪುಸ್ತಕಗಳನ್ನು ಹೊರತರುತ್ತಿರುವುದು ಸಂತೋಷದ ವಿಚಾರ.

ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕರ್ನಾಟಕದ ಕೊಡುಗೆ ಬಹಳ ಮಹತ್ವದ್ದು. ಕರ್ನಾಟಕದ ಹಲವು ಮಹನೀಯರು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ನಡೆಸಿದ ತ್ಯಾಗ ಬಲಿದಾನಗಳು ಅಪಾರ. ಅಂತೆಯೇ ಕರ್ನಾಟಕದ ಸಾವಿರಾರು ಸ್ಥಳಗಳು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿ ನಿಂತಿವೆ. ವಿದುರಾಶ್ವತ್ಥ, ಈಸೂರು, ಶಿವಪುರಗಳನ್ನೂ ಒಳಗೊಂಡಂತೆ ಕರ್ನಾಟಕದ ೩೧ ಜಿಲ್ಲೆಗಳ ಸಾವಿರಾರು ಸ್ಥಳಗಳಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮವು ನಡೆದುದಕ್ಕೆ ಸಾಕ್ಷಿಯಾಗಿ ಹಲವಾರು ಕುರುಹುಗಳು, ಅವಶೇಷಗಳು, ಸ್ಮಾರಕಗಳು ಇತಿಹಾಸದ ಪುಟಗಳಲ್ಲಿ ದಾಖಲಾಗಿವೆ. ಆದಾಗ್ಯೂ ಇನ್ನೂ ದಾಖಲಾಗಬೇಕಾದ ಸಂಗತಿಗಳು ಉಳಿದಿವೆ. ಭಾರತ ಸ್ವಾತಂತ್ರ್ಯದ ಅಮೃತೋತ್ಸವದ ಸಂದರ್ಭದಲ್ಲಿ ಈ ಎಲ್ಲ ಅಂಶಗಳನ್ನು ದಾಖಲಿಸುವ ಕೆಲಸ ತುರ್ತಾಗಿ ಆಗಬೇಕಾಗಿದೆ.

ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ಕರ್ನಾಟಕದ ವಿವಿಧ ಸ್ಥಳದಲ್ಲಿ ನಡೆದ ಘಟನೆಗಳು, ತ್ಯಾಗ, ಬಲಿದಾನಗಳು, ಹೋರಾಟಗಳು ಇತ್ಯಾದಿ

ವಿವರಗಳೆಲ್ಲವನ್ನೂ ಪುಸ್ತಕ ರೂಪದಲ್ಲಿ ದಾಖಲಿಸುವ ಮೂಲಕ, ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಕೊಡುಗೆಯ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಡಿದೆ. ಇದು ನಿಜಕ್ಕೂ ಒಂದು ಸಂಶೋಧನಾತ್ಮಕ ಪ್ರಯತ್ನವೇ ಸರಿ.

ಈ ಸಾರ್ಥಕ ಕಾರ್ಯವನ್ನು ಯಶಸ್ವಿಗೊಳಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರು ಹಾಗೂ ಬಳಗದವರನ್ನು ನಾನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ.

ಎಲ್ಲರಿಗೂ ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಶುಭಾಶಯಗಳು.

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ
ಕರ್ನಾಟಕ ಸರ್ಕಾರ

**ವಿ ಸುನಿಲ್ ಕುಮಾರ್**

ಸ್ವಾತಂತ್ರ್ಯದ ಅಮೃತಮಹೋತ್ಸವ

ಇಂಧನ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು



ಕರ್ನಾಟಕ ಸರ್ಕಾರ

## ಶುಭ ಸಂದೇಶ

**'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ'**

ಜಗತ್ತಿನಲ್ಲಿ ಭಾರತ ಒಂದು ವಿಶಿಷ್ಟವಾದ ಮಹತ್ವದ ರಾಷ್ಟ್ರ. ವಿಶ್ವಕ್ಕೆ ವಿಶ್ವಮಾನವನನ್ನು, ವಿಶ್ವಕುಟುಂಬವನ್ನು, ವಿಶ್ವನಾಥನನ್ನು, ಜಗನ್ಮಾತೆಯನ್ನು ನೀಡಿರುವ ಆಧ್ಯಾತ್ಮದ ಪುಣ್ಯಭೂಮಿ. ವೇದ, ಉಪನಿಷತ್ತುಗಳ ಕಾಲದಿಂದ ಹಿಡಿದು, ರಾಮ, ಕೃಷ್ಣ, ಶಿವ, ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಮೈತ್ರೇಯಿ, ಗಾರ್ಗಿ, ಅರುಂಧತಿ, ಸೀತೆ, ಮಂಡೋದರಿ, ಮೀರಾ, ಅಕ್ಕಮಹಾದೇವಿ ಮೊದಲಾದ ಪೌರಾಣಿಕ, ಐತಿಹಾಸಿಕ ವ್ಯಕ್ತಿತ್ವಗಳ ಅಂತಃಶಕ್ತಿಯಿಂದ ಜಗತ್ತನ್ನು ಬೆಳಗಿದ ದೇಶ ಭಾರತ. ಇಂಥ ದೇಶದ ಮೇಲೆ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗೆ ಆಕ್ರಮಣ ಮಾಡಲು ಪ್ರಯತ್ನಿಸಿ, ಸೋತು ಭಾರತೀಯ ಸಂಸ್ಕೃತಿಯ ಅಗಾಧತೆಗೆ ಶರಣಾಗಿ ಭಾರತೀಯರೇ ಆಗಿಹೋಗಿದ್ದಾರೆ. ಹಾಗೇ ಭಾರತವನ್ನು ಭಾರತವನ್ನಾಗಿ ಉಳಿಸಿರುವ ಮಹಾನ್ ಶಕ್ತಿಯೇ ಸ್ವಾತಂತ್ರ್ಯದ ತೀವ್ರ ತುಡಿತ.

ಭಾರತದ ಸ್ವಾತಂತ್ರ್ಯ ಸಂಗ್ರಾಮ ಸುಮಾರು ಮುನ್ನೂರು ವರ್ಷಗಳಿಗೂ ಹಳೆಯದು. ಇಡೀ ಭಾರತವೇ ಬ್ರಿಟಿಷರ ವಿರುದ್ಧ ಹೋರಾಡಿ ದಾಸ್ಯದಿಂದ ಮುಕ್ತವಾಗಿ ಸ್ವಾತಂತ್ರ್ಯವನ್ನು ಪಡೆದುಕೊಂಡು ಈಗ ೭೫ ವರ್ಷಗಳಾಗಿವೆ. ಈ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭವನ್ನು ಅರ್ಥಪೂರ್ಣವಾಗಿ ಆಚರಿಸಬೇಕಾದ್ದು ನಮ್ಮೆಲ್ಲರ ಕರ್ತವ್ಯ.

ಇಡೀ ದೇಶವನ್ನೇ ಜಾಗೃತಗೊಳಿಸಿದ ಭಾರತದ ಸ್ವಾತಂತ್ರ್ಯ ಸಂಗ್ರಾಮ,

ನಮ್ಮ ಕರ್ನಾಟಕದಲ್ಲಿಯೂ ಸಹ ಸ್ವಾತಂತ್ರ್ಯ ಸಂಗ್ರಾಮದ ಪಾಂಚಜನ್ಯವನ್ನು ಮೊಳಗಿಸಿತು. ಕರ್ನಾಟಕದ ಕಲಿಗಳು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿ, ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ವಿಶಿಷ್ಟ ಕೊಡುಗೆ ನೀಡಿರುವುದನ್ನು ಸ್ಮರಿಸಬೇಕಿದೆ. ಕರ್ನಾಟಕದಲ್ಲಿ ಸಾವಿರಾರು ಸ್ವಾತಂತ್ರ್ಯ ಹೋರಾಟದ ಘಟನೆಗಳನ್ನು ಸಾರುವ ಐತಿಹಾಸಿಕ ಸ್ಥಳಗಳಿವೆ. ಅಂಥ ಸ್ಥಳಗಳು ಅರಿವಿಗೆ ಬಾರದೆ ಮರೆಯಾಗಿ ಹೋಗುತ್ತಿವೆ. ಸ್ವಾತಂತ್ರ್ಯದ ಹಣತೆ ಹೊತ್ತಿಸಿದ ಪ್ರಮುಖ ಸ್ಥಳಗಳಲ್ಲಿ ತ್ಯಾಗ, ಬಲಿದಾನಗಳನ್ನು ನೆನಪಿಸುವ ನಿಟ್ಟಿನಲ್ಲಿ ಮತ್ತು ಇಂದಿನ ಪೀಳಿಗೆಗೆ ತಿಳಿಸಿಕೊಡುವ ಕೆಲಸ ಈ ಅಮೃತ ಮಹೋತ್ಸವದ ಸಂದರ್ಭದಲ್ಲಿ ಆಗುತ್ತಿರುವುದು ಸಂತಸದ ವಿಷಯ. ಈ ನಿಟ್ಟಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಒಂದು ಬೃಹತ್ ಆಂದೋಲನವನ್ನು ಹಮ್ಮಿಕೊಂಡಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಐತಿಹಾಸಿಕ ಮಹತ್ವಗಳನ್ನು ತಿಳಿಸಿಕೊಡುವ ೭೫ ಸ್ಥಳಗಳ ಬಗ್ಗೆ ೭೫ ವಿವಿಧ ಲೇಖಕರಿಂದ ಒಟ್ಟು ೭೫ ಪುಸ್ತಕಗಳನ್ನು, ಅದರ ತಲಾ ೧೦೦೦ ಪ್ರತಿಯಂತೆ ೭೫೦೦೦ ಪ್ರತಿಗಳನ್ನು ಎರಡು ತಿಂಗಳಲ್ಲಿ ಬರೆಯಿಸಿ, ಮುದ್ರಿಸಿ ಓದುಗರಿಗೆ ತಲುಪಿಸುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರತಿಯೊಬ್ಬರನ್ನೂ ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ.

ನಾವೆಲ್ಲರೂ ಕೂಡಿ ನಮ್ಮ ನಮ್ಮ ಮನೆಮನಗಳಿಂದ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆಗಳನ್ನು ಬೆಳೆಸೋಣ. ರಸಋಷಿ ಕುವೆಂಪು ಅವರು ಹೇಳಿರುವ 'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ' ಎಂಬ ಆದರ್ಶದೊಂದಿಗೆ ಕರ್ನಾಟಕದ ಮೂಲಕ ಭಾರತವನ್ನೂ, ಭಾರತದ ಮೂಲಕ ಕರ್ನಾಟಕವನ್ನೂ ಅಭಿನ್ನಗೊಳಿಸೋಣ, ಬಲಿಷ್ಠಗೊಳಿಸೋಣ. ಭವ್ಯ ಕರ್ನಾಟಕ, ಭವ್ಯ ಭಾರತ ನಿರ್ಮಿಸೋಣ.

**(ವಿ ಸುನಿಲ್ ಕುಮಾರ್)**
ಇಂಧನ, ಕನ್ನಡ ಮತ್ತು ಸಂಸ್ಕೃತಿ
ಇಲಾಖೆ ಸಚಿವರು

## ಪ್ರಧಾನ ಸಂಪಾದಕರ ಮಾತು

ಸ್ವಾತಂತ್ರ್ಯ ಎಂಬುದು ಲೌಕಿಕವಾಗಿಯೂ ಲೋಕೋತ್ತರವಾಗಿಯೂ ಮಹೋನ್ನತವಾದ ಮೌಲ್ಯ. ಭಾರತೀಯ ಸಂಸ್ಕೃತಿಯು ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಪುರುಷಾರ್ಥವೆಂದು ಕರೆದಿದೆ. ಮೋಕ್ಷವೆಂದರೆ ಬಿಡುಗಡೆ, ಸ್ವಾತಂತ್ರ್ಯ ಎಂದರ್ಥ. ಹುಟ್ಟು ಸಾವುಗಳಿಂದ ಬಿಡುಗಡೆ ಎಂಬುದು ಲೋಕೋತ್ತರವಾದ ಅರ್ಥವಾದರೆ, ಸಾವಿಲ್ಲದ, ನೋವಿಲ್ಲದ ಸ್ಥಿತಿಗಾಗಿ ಕಲ್ಯಾಣ ನಾಡಿನ ನಿರ್ಮಾಣಕ್ಕಾಗಿ ನಾವು ಗಳಿಸುವ ನಮ್ಮ ಸ್ವಯಂ ನಿಯಂತ್ರಣದ ಸ್ವಾತಂತ್ರ್ಯ ಎಂಬುದು ಲೌಕಿಕವಾದ ಅರ್ಥ. ಲೌಕಿಕ ಹಾಗೂ ಅಲೌಕಿಕಗಳು ಪರಸ್ಪರ ವಿರೋಧಿಗಳಲ್ಲ; ಅವು ಪರಸ್ಪರ ಪೂರಕವಾದವು. ಲೋಕವನ್ನು ಲೋಕೋತ್ತರದ ಔನ್ನತ್ಯಕ್ಕೆ ಏರಿಸುವ ದರ್ಶನವೇ ಭಾರತೀಯ ದರ್ಶನ. ಸ್ವಾತಂತ್ರ್ಯ ನಮ್ಮ ಧರ್ಮ, ನಮ್ಮ ಆತ್ಮ, ನಮ್ಮ ಜೀವನದ ಪರಮ ಪುರುಷಾರ್ಥ. ಅದನ್ನು ಬಯಲು ಎಂದೂ ಕರೆದಿದ್ದಾರೆ. ಅಂತಹ ಸ್ವಾತಂತ್ರ್ಯಕ್ಕಾಗಿ ಭಾರತವು ತನ್ನ ಪುರಾತನ ಕಾಲದಿಂದಲೂ ಬದುಕುತ್ತಾ ಬಂದಿದೆ. ಸ್ವಾತಂತ್ರ್ಯಕ್ಕೆ ಚ್ಯುತಿ ಬಂದಾಗಲೆಲ್ಲ ಭಾರತೀಯರು ಭರತಮಾತೆಯ ಪದತಲದಲ್ಲಿ ತಮ್ಮ ತನು–ಮನ–ಧನಗಳನ್ನು ಅರ್ಪಿಸಿದ್ದಾರೆ. ಅದನ್ನು ರಸಋಷಿ ಕುವೆಂಪು ಅವರು "ಇಂದು ರಕ್ತದ ಬಿಂದು ನಾಳೆ ಸೌಖ್ಯದ ಸಿಂಧು" ಎಂದು ಕರೆದಿದ್ದಾರೆ.

ನಮ್ಮ ದೇಶದ ಸ್ವಾತಂತ್ರ್ಯ ಎಂದರೆ ಅದು ತ್ಯಾಗ, ಬಲಿದಾನಗಳ ಫಲ. ಭಾರತದ ಮೇಲೆ ದಾಳಿ ಮಾಡಲು ಬಂದ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗಿನ ಎಲ್ಲ ದಾಳಿಕೋರರ ಕ್ರೌರ್ಯವನ್ನು ಮೆಟ್ಟಿ ನಿಂತು ಭಾರತೀಯರು ಭಾರತಾಂಬೆಯ ಆತ್ಮಗೌರವವನ್ನು ಎತ್ತಿಹಿಡಿದಿರುವುದರ ಪ್ರತೀಕ ನಮ್ಮ ಸ್ವಾತಂತ್ರ್ಯ.

ಪ್ರಸ್ತುತ ೧೫.೦೮.೧೯೪೭ ರಂದು ನಾವು ಗಳಿಸಿದ ಸ್ವಾತಂತ್ರ್ಯದ ಅಮೃತಘಳಿಗೆಗೆ ಇದೀಗ ೧೫.೦೮.೨೦೨೧ಕ್ಕೆ ೭೫ನೆಯ ಸ್ವಾತಂತ್ರ್ಯ ಅಮೃತ ಮಹೋತ್ಸವ ಸಂಭ್ರಮ. ೧೫.೦೮.೨೦೨೨ಕ್ಕೆ ೭೫ ವರ್ಷಗಳನ್ನು ಪೂರೈಸಿ ೭೬ನೆಯ ಸ್ವಾತಂತ್ರ್ಯೋತ್ಸವದ ಆತ್ಮನಿರ್ಭರ ಭಾರತದ ನವನಿರ್ಮಾಣದ ಅವಕಾಶಗಳ ಸಂಭ್ರಮ. ಈ ಒಂದು ವರ್ಷ ಕಾಲ ಭಾರತ ಸರ್ಕಾರ, ಕರ್ನಾಟಕ ಸರ್ಕಾರ "ಸ್ವಾತಂತ್ರ್ಯದ ಅಮೃತ ಮಹೋತ್ಸವ"ವನ್ನು ಆಚರಿಸುತ್ತಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಆಗಸ್ಟ್– ೨೦೨೧ರ ತಿಂಗಳು ಪೂರ್ತಿ "ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ" ಎಂಬ ಹೆಸರಿನಲ್ಲಿ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ನಡೆದಿರುವ ಸ್ವಾತಂತ್ರ್ಯ ಹೋರಾಟ ಕುರಿತ ಆನ್ಲೈನ್ ಉಪನ್ಯಾಸಗಳನ್ನು ನಡೆಸಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಾದ ಶ್ರೀ ಸುನಿಲ್ ಕುಮಾರ್ ಅವರು ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ರಾಜ್ಯಾದ್ಯಂತ ಬೃಹತ್ ಸ್ವರೂಪದಲ್ಲಿ ಅರ್ಥಪೂರ್ಣವಾಗಿ ಆಚರಿಸಬೇಕೆಂದು ತೀರ್ಮಾನಿಸಿದ್ದಾರೆ. ಅವರಿಗೆ ರಾಜ್ಯದ ೭೫ ಸ್ಥಳಗಳಲ್ಲಿ ೭೫ ಸ್ವಾತಂತ್ರ್ಯ ಜಾಥಾಗಳು ನಡೆಯಬೇಕು, ಎಲ್ಲ ಜಿಲ್ಲೆಗಳಿಂದ ರಥಯಾತ್ರೆ ಆಗಬೇಕು, ಬೆಂಗಳೂರು ಮಹಾನಗರದಲ್ಲಿ ಮೂರು ದಿನಗಳ ಸಮಾವೇಶ, ಪ್ರದರ್ಶನಿ, ಪುಸ್ತಕ ಮಾರಾಟ ಮೊದಲಾದ ಹತ್ತು ಹಲವು ಚಟುವಟಿಕೆಗಳನ್ನು ನಡೆಸುವ ಮೂಲಕ ಹೊಸ ತಲೆಮಾರಿಗೆ ಸ್ವಾತಂತ್ರ್ಯದ ಅಮೃತವನ್ನುಣಿಸಬೇಕೆಂಬ ಕನಸಿದೆ. ಅದರ ಭಾಗವಾಗಿ ಅವರು ರಾಜ್ಯದ ೭೫ ಸ್ವಾತಂತ್ರ್ಯ ಹೋರಾಟದ ಸ್ಥಳಗಳನ್ನು ಗುರುತಿಸಿ ೭೫ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸುವ ಜವಾಬ್ದಾರಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿದ್ದಾರೆ. ನಮಗೆ ಜವಾಬ್ದಾರಿ ವಹಿಸಿದ್ದು ದಿನಾಂಕ: ೩೦.೧೧.೨೦೨೧ರಂದು ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ. ಅಂದಿನಿಂದಲೇ ಕಾರ್ಯಪ್ರವೃತ್ತರಾದ ನಾವು ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಜಿಲ್ಲಾ ಸಹಾಯಕ ನಿರ್ದೇಶಕರಿಂದ ಸ್ಥಳಗಳ ಮಾಹಿತಿ ಪಡೆದೆವು. ಜೊತೆಗೆ ರಾಜ್ಯದ ಐದು ಜನರನ್ನು ಸಂಪಾದಕರನ್ನಾಗಿ ನಿಯೋಜಿಸಿ ದಿನಾಂಕ: ೦೩.೧೨.೨೦೨೧ರಂದು ಅಕಾಡೆಮಿಯಲ್ಲಿ ಸಂಪಾದಕರ ಸಭೆ ನಡೆಸಿದೆವು. ಸಂಪಾದಕರಾಗಿ ಡಾ. ಮೃತ್ಯುಂಜಯ ರುಮಾಲೆ, ಹೊಸಪೇಟೆ, ಡಾ. ಎಸ್. ಜಿ. ರಾಮದಾಸ ರೆಡ್ಡಿ, ಮೈಸೂರು, ಡಾ. ಪ್ರಕಾಶ ಗ. ಖಾಡೆ, ಬಾಗಲಕೋಟೆ,



ಶ್ರೀ ನರೇಂದ್ರಕುಮಾರ್ ಎಸ್.ಎಸ್., ಬೆಂಗಳೂರು ಹಾಗೂ ಶ್ರೀಮತಿ ರಾಜಲಕ್ಷ್ಮಿ ಕೋಡಿಬೆಟ್ಟು, ಮಂಗಳೂರು ಇವರೊಂದಿಗೆ ಎಲ್ಲ ಸ್ಥಳಗಳ ಬಗ್ಗೆ ಚರ್ಚಿಸಿ ೭೫ ಸ್ಥಳಗಳನ್ನು ಆಯ್ಕೆ ಮಾಡಿದೆವು. ಒಬ್ಬೊಬ್ಬ ಸಂಪಾದಕರಿಗೆ ೧೫ ಸ್ಥಳಗಳನ್ನು ಹಂಚಿ, ೧೫ ಲೇಖಕರಿಂದ ೧೫ ಕಿರುಪುಸ್ತಕಗಳನ್ನು ಬರೆಯಿಸಿಕೊಡುವ ಜವಾಬ್ದಾರಿ ನೀಡಿದೆವು. ಎರಡು ತಿಂಗಳ ಅವಧಿಯಲ್ಲಿ ಈ ೭೫ ಪುಸ್ತಕಗಳು ಪ್ರಕಟವಾಗುತ್ತಿವೆ. ಈ ಕೃತಿಗಳು ಇತಿಹಾಸದ ಶಾಸ್ತ್ರೀಯ ಮಾದರಿ, ವರದಿಯ ಕಥನ ಮಾದರಿ ಹಾಗೂ ಸೃಜನಶೀಲ ಅಭಿವ್ಯಕ್ತಿಯ ಸಾಹಿತ್ಯ ಮಾದರಿಗಳಿಂದ ಕೂಡಿರುವುದು ಗಮನಾರ್ಹ. ಅತೀ ಕಡಿಮೆ ಅವಧಿಯಲ್ಲಿ ಕ್ಷೇತ್ರಕಾರ್ಯ ಮತ್ತು ಅಧ್ಯಯನ ಮಾಡಿ ಮೌಲಿಕವಾದ ಕೃತಿಗಳನ್ನು ಬರೆದುಕೊಟ್ಟಿರುವ ಎಲ್ಲಾ ಲೇಖಕರ, ಸಂಪಾದಕರ ಶ್ರಮ ಸಾರ್ಥಕತೆ ಪಡೆದಿದೆ. ಈ ನಿಟ್ಟಿನ ಅಧ್ಯಯನಗಳಿಗೆ ಈ ಕೃತಿಗಳು ಪ್ರೇರೇಪಿಸುತ್ತವೆ. ಇದೊಂದು ತುರ್ತಾದ ಆಂದೋಲನಾತ್ಮಕವಾದ ಪ್ರಯತ್ನ. ಇದಕ್ಕೆ ಸಂಪೂರ್ಣ ಸಹಕಾರ ನೀಡಿದ ಮಾನ್ಯ ಸಚಿವರಾದ ಶ್ರೀ ವಿ ಸುನಿಲ್ ಕುಮಾರ್ ಅವರಿಗೆ, ಎಲ್ಲಾ ಸಂಪಾದಕರಿಗೆ, ಎಲ್ಲಾ ಲೇಖಕರಿಗೆ, ಇಲಾಖೆಯ ಕಾರ್ಯದರ್ಶಿಗಳಾದ ಡಾ. ಎನ್. ಮಂಜುಳಾ ಅವರಿಗೆ, ನಿರ್ದೇಶಕರಾದ ಶ್ರೀ ಎಸ್. ರಂಗಪ್ಪ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಅಶೋಕ್ ಎನ್. ಚಲವಾದಿ ಅವರಿಗೆ ಹಾಗೂ ಎಲ್ಲಾ ಅಧಿಕಾರಿ ವರ್ಗಕ್ಕೆ ಸಾಹಿತ್ಯ ಅಕಾಡೆಮಿಯ ಸರ್ವ ಸದಸ್ಯರಿಗೆ ಪ್ರೀತಿಯಿಂದ ವಂದಿಸುತ್ತೇನೆ. ಯೋಜನೆ ಪೂರ್ಣಗೊಳ್ಳಲು ವಿಶೇಷವಾಗಿ ನೆರವಾದ ಮಿತ್ರರಾದ ಶ್ರೀ ಮಾಲತೀಶ್ ಭಟ್, ಶ್ರೀ ಹರ್ಷ ನಾರಾಯಣ, ಶ್ರೀಮತಿ ನಯನಾ ಎಸ್. ಅವರನ್ನು ನೆನೆಯುತ್ತಾ ವಂದಿಸುತ್ತೇನೆ. ಕಡಿಮೆ ಅವಧಿಯಲ್ಲಿ ಹಗಲಿರುಳು ಶ್ರಮಿಸಿದ ದಣಿವರಿಯದ ದುಡಿಮೆಗಾರರಾದ ರಿಜಿಸ್ಟ್ರಾರ್ ಎನ್. ಕರಿಯಪ್ಪ, ನಮ್ಮ ಬಳಗ ವಿ. ಹರೀಶ್‌ಕುಮಾರ್, ಹರೀಶ್, ಸೈಯದ್ ಜಾವೀದ್, ಸುಚಿತ್ರ ಎಸ್. ಜಿ., ಗೋಪಾಲ ಎನ್., ಸುನೀಲ್ ಅವರಿಗೆ ಹಾಗೂ ಸುಂದರವಾಗಿ ಮುದ್ರಿಸಿದ ರಶ್ಮಿ ಪ್ರಿಂಟರ್ಸ್ ಬಳಗಕ್ಕೆ, ಮುಖಪುಟ ರಚಿಸಿಕೊಟ್ಟ ಶ್ರೀ ಮುರಳೀಧರ ವಿ. ರಾಥೋಡ್ ಅವರಿಗೆ ವಂದಿಸುತ್ತೇನೆ.

**ಬಿ. ವಿ. ವಸಂತಕುಮಾರ್**
ಅಧ್ಯಕ್ಷರು

# ಲೇಖಕರ ಮಾತು

ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು ಇದೀಗ ಅಮೃತೋತ್ಸವ ಆಚರಿಸುತ್ತಿರುವ ವಿಶೇಷ ಸಂದರ್ಭ. ಈ ಸಂದರ್ಭದ ಸಂಸ್ಮರಣೆಗಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿ, ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ವಿಶಿಷ್ಟ ಪಾತ್ರ ವಹಿಸಿದ ೭೫ ಊರುಗಳನ್ನು ಪಟ್ಟಿ ಮಾಡಿ, ಅವುಗಳ ಮೇಲೆ ಪರಿಚಯಾತ್ಮಕ ಪುಸ್ತಕಗಳನ್ನು ಬರೆಸಿ ಪ್ರಕಟಿಸುವ ಯೋಜನೆ ಹಾಕಿಕೊಂಡಿದ್ದು ಮತ್ತು ಇದರಲ್ಲಿ ನಾನು ಕೂಡ ಭಾಗವಹಿಸುವಂತಾದದ್ದು ನನ್ನ ಪಾಲಿಗೆ ಒಂದು ಸ್ಮರಣೀಯ ಸಂಗತಿ. ಈ ಕಾಲದ ನಮ್ಮ ಜನ ಎಂಥವರ ಕೊಡುಗೆಯಿಂದ, ತ್ಯಾಗ ಬಲಿದಾನಗಳಿಂದ ನಾವು ಈಗ ಸುಖ ಅಧಿಕಾರ ಅನುಭವಿಸುತ್ತಿದ್ದೇವೆ ಎಂಬ ಪರಿವೆಯೇ ಇಲ್ಲದೆ ಬಹುತೇಕ ಮರೆತು ಸ್ವೇಚ್ಛಾ ಜೀವನದಲ್ಲಿ ತಲ್ಲೀನವಾಗಿರುವ ಈ ಸನ್ನಿವೇಶದಲ್ಲಿ ಇಂಥ ಪುಸ್ತಕಗಳ ಪ್ರಕಟಣೆಯಿಂದ ಕೆಲವರಾದರೂ ಆ ಕಾಲ ಹೇಗಿತ್ತು, ನಮ್ಮ ಆ ಜನ ಹೇಗಿದ್ದರು, ಎಂದು ಪರಿಚಯ ಮಾಡಿಕೊಳ್ಳುವುದಾದರೆ, ಅದರಿಂದ ಅವರ ಮನಸ್ಸು ಮಿಡಿಯುವುದಾದರೆ, ಈ ಯೋಜನೆ ಸಾರ್ಥಕ ಎಂದು ಹೇಳಬೇಕು. ಈ ಸಂದರ್ಭದಲ್ಲಿ ಅಕಾಡೆಮಿ ನನಗೆ ಬರೆಯಲು ವಹಿಸಿರುವ ವಿಷಯವೆಂದರೆ 'ಸ್ವಾತಂತ್ರ್ಯ ಹೋರಾಟದಲ್ಲಿ ಚಿತ್ರದುರ್ಗ'.

ಅಕಾಡೆಮಿಯ ಯೋಜನೆಯ ಸಂಪಾದಕರಲ್ಲಿ ಒಬ್ಬರಾದ ಡಾ. ಎಸ್. ಜಿ. ರಾಮದಾಸರೆಡ್ಡಿಯವರು ಈ ಯೋಜನೆಯ ಬಗ್ಗೆ ತಿಳಿಸಿ, ಹೀಗೊಂದು ಪುಸ್ತಕ ಬರೆಯಬೇಕೆಂದು ಕೇಳಿದಾಗ, ಅದಕ್ಕೆ ನೀಡುತ್ತಿರುವ ಕಾಲಾವಧಿ ತೀರಾ ಅತ್ಯಲ್ಪವಾಯಿತೆನ್ನಿಸಿ ಬೇಡವೆನಿಸಿತಾದರೂ, ಮತ್ತೆ ಮರುಯೋಚನೆ ಮಾಡಿ ಎಷ್ಟು ಸಾಧ್ಯವೋ ಅಷ್ಟು ಆ ಬಗ್ಗೆ ಬರೆಯಲು ಪ್ರಯತ್ನಿಸುವುದು ಉಚಿತ ಎನ್ನಿಸಿ ಒಪ್ಪಿಕೊಂಡೆ. ಹಾಗಾಗಿ ಈ ಪುಸ್ತಕವು ಕಾಲಾವಧಿಯ ನಿರ್ಬಂಧದಿಂದ ಇನ್ನೂ ಕೆಲವು ಮಿತಿಗಳಿಂದ ಇಷ್ಟರಮಟ್ಟಿಗೆ ಒಂದು ರೂಪ ತಾಳಿ ಈಗ ನಿಮ್ಮ ಕೈಸೇರುತ್ತಿದೆ. ಬಲ್ಲವರು ಇದರ ಕೊರತೆಗಳನ್ನು ತಿಳಿಸಿದರೆ, ಮುಂದೊಮ್ಮೆ ಈ



ಅತೃಪ್ತಿಯನ್ನು ಸುಧಾರಣೆ ಮಾಡಿಕೊಳ್ಳಬಹುದು. ಆ ಕೆಲಸವನ್ನು ಇತಿಹಾಸಪ್ರಿಯರು, ವಿದ್ವಾಂಸರು, ಸಹೃದಯರು ಮಾಡುವಂತಾಗಲಿ ಎಂದು ಆಶಿಸುತ್ತೇನೆ.

ಕನ್ನಡ ನಾಡಿನಲ್ಲಿ ವಿಶಿಷ್ಟ ಇತಿಹಾಸ ಹೊಂದಿರುವ ಸ್ಥಳ ಚಿತ್ರದುರ್ಗ. ಇದು ಪ್ರಾಚೀನ ಇತಿಹಾಸಕ್ಕೆ ಹೇಗೋ ಹಾಗೇ ಮಧ್ಯಯುಗೀನ ಹಾಗೂ ಆಧುನಿಕ ಇತಿಹಾಸಕ್ಕೂ ಪ್ರಸಿದ್ಧವಾಗಿರುವ ಸ್ಥಳ. ಇಲ್ಲಿ ನಡೆದ ಸ್ವಾತಂತ್ರ್ಯ ಹೋರಾಟವೂ ತುಂಬ ಮಹತ್ತ್ವದ್ದು. ಅನೇಕ ಮಹತ್ತ್ವದ ವ್ಯಕ್ತಿಗಳು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದಾರೆ. ಅವರಷ್ಟೇ ಅಲ್ಲ, ಸಾಮಾನ್ಯರೂ ಸಹ ತಮ್ಮ ದೇಶ ಪ್ರೇಮವನ್ನು ಆ ಸಂದರ್ಭದಲ್ಲಿ ಮೆರೆದಿದ್ದಾರೆ. ತ್ಯಾಗವನ್ನೂ ಸಹ ತೋರಿಸಿದ್ದಾರೆ. ಅಷ್ಟೇ ಅಲ್ಲ, ಚಿತ್ರದುರ್ಗ ಜಿಲ್ಲೆಯಲ್ಲಿ ಬಂಧಿಸಲ್ಪಟ್ಟ ಸತ್ಯಾಗ್ರಹಿಗಳ ಸಂಖ್ಯೆ ಮೈಸೂರು ಸಂಸ್ಥಾನದಲ್ಲಿ ದ್ವಿತೀಯ ಸ್ಥಾನ ಪಡೆದಿರುವುದು ಇಲ್ಲಿ ಹೋರಾಟ ಎಷ್ಟು ತೀವ್ರವಾಗಿತ್ತೆಂಬುದಕ್ಕೆ ಸಾಕ್ಷಿಯಾಗಿದೆ. ಹಳ್ಳಿಗರು ಅದರಲ್ಲೂ ಮಹಿಳೆಯರೂ ಅನಕ್ಷರಸ್ಥರು ಕೂಡಾ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕಿ ಶುದ್ಧ ಮನಸ್ಸಿನಲ್ಲಿ, ನಿರಪೇಕ್ಷ ಬುದ್ಧಿಯಿಂದ, ಕೇವಲ ದೇಶಪ್ರೇಮದಿಂದ ಎಷ್ಟೆಲ್ಲ ಉಲ್ಲೇಖನೀಯ ಸಾಧನೆ ಮಾಡಿದರೆಂಬುದೇ ಇಂದು ಮರೆತು ಹೋಗುವಂತಾಗಿದೆ. ಈ ಅಮೃತ ಮಹೋತ್ಸವ ಕಾಲಕ್ಕೆ ಅದನ್ನೆಲ್ಲ ನೆನಪಿಸಿಕೊಳ್ಳದಿದ್ದರೆ, ನಾವು ಭಾರತೀಯರಾಗುತ್ತೇವೆಯೆ? ಮನುಷ್ಯ ರಾಗುತ್ತೇವೆಯೆ?

ಈ ಪುಸ್ತಕ ಬರೆಯಲು ಪ್ರೇರಣೆಯಿತ್ತ ಡಾ. ರಾಮದಾಸರೆಡ್ಡಿ ಅವರಿಗೆ, ಅವರ ಮೂಲಕ ಈ ಕೆಲಸ ವಹಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿಗೆ, ಇದನ್ನು ಬರೆಯುವಲ್ಲಿ ಪೂರ್ಣ ಸಹಕಾರ ನೀಡಿದ ನನ್ನ ಶ್ರೀಮತಿ ಡಾ. ಯಶೋದಾ ಅವರಿಗೆ, ಕನ್ನಡದ ಖ್ಯಾತ ಕಾದಂಬರಿಕಾರ ತರಾಸು ಅವರು ತುಮಕೂರಲ್ಲಿ ಓದುತ್ತಿದ್ದಾಗ್ಗೆ ಚಳುವಳಿಯಲ್ಲಿ ಧುಮುಕಿ ಅಲ್ಲಿ ಜೈಲಿನಲ್ಲಿ ಇದ್ದುದರ ಬಗ್ಗೆ ತಿಳಿಸಿದ ತುಮಕೂರಿನ ಮಿತ್ರರಾದ ಡಾ. ಬಿ. ನಂಜುಂಡಸ್ವಾಮಿ ಅವರಿಗೆ, ವಿವಿಧ ಪುಸ್ತಕಗಳನ್ನು ನೀಡಿದ ಡಾ. ಮೈಲಹಳ್ಳಿ ರೇವಣ್ಣ, ಶ್ರೀ ಮಂಜುನಾಥರೆಡ್ಡಿ, ಶ್ರೀ ವಿವೇಕಾನಂದ ಅವರಿಗೆ, ಮಾಹಿತಿ ಸಂಗ್ರಹಕ್ಕೆ ಸ್ಥಳ ಪರಿಶೀಲನೆಗೆ ಕರೆದೊಯ್ದು ಸಹಕಾರ ನೀಡಿದ ಶ್ರೀ ಸತ್ಯನಾರಾಯಣರೆಡ್ಡಿ ದಂಪತಿಗಳಿಗೆ,

ಶ್ರೀ ಮಾಜಿ ಸತ್ಯನಾರಾಯಣ, ಶ್ರೀ ಸಾನಿಕಂ ಕೃಷ್ಣಾರೆಡ್ಡಿ, ದಿ. ಯರ್ರಪ್ಪನವರ ಮಗ ಶ್ರೀ ರಾಜು, ಶ್ರೀ ಗಾರೆಮನೆ ಶಿವಣ್ಣರೆಡ್ಡಿ, ಶ್ರೀ ಜಿ. ಎನ್. ಬಸವರಾಜಪ್ಪ, ಶ್ರೀ ಎ. ವಿ. ನುಂಕಪ್ಪ, ಶ್ರೀ ಎ. ವಿಜಯಕುಮಾರ್, ಶ್ರೀ ನಿಶಾಂತ್ ರಂಗಾರೆಡ್ಡಿ, ಈ ಪುಸ್ತಕದ ಅಕ್ಷರಜೋಡಣೆ ಮತ್ತು ಪುಟವಿನ್ಯಾಸ ಮಾಡಿದ ಚಿತ್ರದುರ್ಗದ ವೈ. ಆರ್. ಸ್ವಾಭಿಮಾನ್– ಇವರೆಲ್ಲರಿಗೂ ಕೃತಜ್ಞತೆಯ ವಂದನೆಗಳು.

**ಡಾ. ಬಿ. ರಾಜಶೇಖರಪ್ಪ**

## ಪರಿವಿಡಿ


| | |
|---|---|
| ಶುಭ ಸಂದೇಶ | ೩ |
| ಶುಭ ಸಂದೇಶ | ೫ |
| ಪ್ರಧಾನ ಸಂಪಾದಕರ ಮಾತು | ೭ |
| ಲೇಖಕರ ಮಾತು | ೧೦ |
| ಸ್ವಾತಂತ್ರ್ಯ ಚಳುವಳಿಯಲ್ಲಿ ಚಿತ್ರದುರ್ಗ | ೧೫ |
| ಅನುಬಂಧ – ೧ | ೪೧ |
| ಆಧಾರಸೂಚಿ | ೪೪ |
| ಅನುಬಂಧ – ೨ | |
| ಛಾಯಾಚಿತ್ರಗಳು | ೪೭ |
| ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ | ೫೯ |

# ಸ್ವಾತಂತ್ರ್ಯ ಚಳುವಳಿಯಲ್ಲಿ ಚಿತ್ರದುರ್ಗ

ಚಿತ್ರದುರ್ಗ ಕರ್ನಾಟಕದ ಹೃದಯಭಾಗದಲ್ಲಿರುವ ಜಿಲ್ಲೆ. ಇದು ಜಿಲ್ಲಾ ಮತ್ತು ತಾಲೂಕು ಆಡಳಿತ ಕೇಂದ್ರವೂ ಹೌದು. ಹಿಂದೆ ದಾವಣಗೆರೆ, ಹರಿಹರ, ಜಗಳೂರು, ಹೊಳಲ್ಕೆರೆ, ಚಳ್ಳಕೆರೆ, ಚಿತ್ರದುರ್ಗ, ಹೊಸದುರ್ಗ, ಹಿರಿಯೂರು, ಮೊಳಕಾಲ್ಮುರು, ಈ ತಾಲ್ಲೂಕುಗಳು ಚಿತ್ರದುರ್ಗ ಜಿಲ್ಲೆಯೊಳಗಿದ್ದ ಪ್ರದೇಶಗಳಾಗಿದ್ದುವು. ಈಚೆಗೆ ದಾವಣಗೆರೆ, ಹರಿಹರ, ಜಗಳೂರು ಈ ಮೂರು ತಾಲ್ಲೂಕುಗಳು ಹೊಸದಾಗಿ ರೂಪುಗೊಂಡ ದಾವಣಗೆರೆ ಜಿಲ್ಲೆಯಲ್ಲಿ ಸೇರಿಹೋದುವು. ನದಿ ನೀರಾವರಿ ಸೌಲಭ್ಯವಿಲ್ಲದ ಬಹುಭಾಗ ಈ ಜಿಲ್ಲೆಯ ಬಯಲು ಪ್ರದೇಶ. ಶ್ರೀಮಂತ ಉತ್ಪನ್ನಗಳಿಲ್ಲದ, ಪದೇಪದೇ ಬರದ ದವಡೆಗೆ ಸಿಲುಕಿ ನಲುಗುತ್ತಿರುವ ಜಿಲ್ಲೆ ಇದು. ಈ ಜಿಲ್ಲೆಯಲ್ಲಿ ನವಶಿಲಾಯುಗದಿಂದಲೂ ಜನವಸತಿ ಇತ್ತೆಂಬುದು ಈ ಜಿಲ್ಲೆಯ ಬ್ರಹ್ಮಗಿರಿ ಉತ್ಖನನಗಳಿಂದ ತಿಳಿದಿದೆ. ಚಿಕ್ಕಮಧುರೆ, ಬ್ರಹ್ಮಗಿರಿ, ತುರುವನೂರು ಮೊದಲಾದೆಡೆಗಳಲ್ಲಿ ಶಿಲಾಯುಗ ಕಾಲದ ಬೃಹತ್‌ಸಮಾಧಿಗಳಿದ್ದು, ಕಬ್ಬಿಣ ಯುಗದ ಸಂಸ್ಕೃತಿ ಇಲ್ಲಿ ಹರಡಿತ್ತು ಎಂದು ಅಭಿಪ್ರಾಯವಿದೆ. ಈ ಜಿಲ್ಲೆ ಮೌರ್ಯ ಸಾಮ್ರಾಜ್ಯಕ್ಕೆ ಸೇರಿತ್ತೆಂಬುದು ಬ್ರಹ್ಮಗಿರಿ, ಸಿದ್ದಾಪುರ ಮತ್ತು ಜಟಿಂಗ ರಾಮೇಶ್ವರಗಳಲ್ಲಿ ದೊರೆತಿರುವ ಅಶೋಕನ ಶಾಸನಗಳಿಂದ ತಿಳಿದುಬರುತ್ತದೆ. ಅನಂತರ ಈ ಪ್ರದೇಶದಲ್ಲಿ ಶಾತವಾಹನ ಕಾಲದ ಯಜ್ಞಶ್ರೀ ಸಾತಕರ್ಣಿಯ, ಚುಟು ಮತ್ತು ಮಹಾರಠಿ ವಂಶದವರ ಅನೇಕ ಸೀಸದ ನಾಣ್ಯಗಳು ದೊರೆತಿವೆ. ೧, ೨ನೆಯ ಶತಮಾನಗಳಲ್ಲಿ ಈ ಪ್ರದೇಶ ರೋಮ್ ಚಕ್ರಾಧಿಪತ್ಯದೊಡನೆ ವ್ಯಾಪಾರ ಸಂಬಂಧ ಹೊಂದಿತ್ತು. ಚಂದ್ರವಳ್ಳಿಯಲ್ಲಿ ಆಗಸ್ಟಸ್ ಮತ್ತು ಟೈಬೀರಿಯಸ್ ಸೀಜರ್ ಚಕ್ರವರ್ತಿಗಳ ನಾಣ್ಯಗಳು, ಮೆಡಿಟರೇನಿಯನ್ ಪ್ರದೇಶದಲ್ಲಿ ದೊರೆತಂತಹ ರೀತಿಯ ಮಣ್ಣಿನ ಪಾತ್ರೆಗಳು, ಇಲ್ಲಿ ದೊರೆತಿವೆ ಎನ್ನಲಾಗಿದೆ. ಅನಂತರ ಈ ಪ್ರದೇಶವನ್ನು ಕದಂಬರು ಆಳಿದರು. ಚಂದ್ರವಳ್ಳಿ ಅಥವಾ ಹುಲಿಗೊಂದಿ ಪ್ರದೇಶ ಕನ್ನಡಿಗರಿಗೆ

ಕನ್ನಡಿಗರದೇ ಆದ ಕದಂಬ ಸಾಮ್ರಾಜ್ಯ ಸ್ಥಾಪನೆಗೆ ಬುನಾದಿ ಹಾಕಿಕೊಟ್ಟ ಸ್ಥಳವೂ ಹೌದು. ಕ್ರಿ. ಶ. ೪ನೆಯ ಶತಮಾನದ ಆರಂಭದಲ್ಲಿ, ಕದಂಬ ವಂಶದ ಮಯೂರವರ್ಮ ಈ ಪ್ರದೇಶದಲ್ಲಿ ವನವಾಸದ ನೆಲೆಯನ್ನು ಮಾಡಿಕೊಂಡು ಪಲ್ಲವರ ದೊಡ್ಡ ಸೈನ್ಯದೊಂದಿಗೆ ಹೋರಾಡಿ, ಅದನ್ನು ಮಣಿಸಿ, ಕಡೆಗೆ ಪಲ್ಲವರಿಂದಲೇ ಕಿರೀಟಧಾರಣೆ ಮಾಡಿಸಿಕೊಂಡು ಕದಂಬ ಸಾಮ್ರಾಜ್ಯವನ್ನು ಸ್ಥಾಪನೆ ಮಾಡಿದ ಬಹುಮುಖ್ಯ ಸ್ಥಳ. ಚಿತ್ರದುರ್ಗದ ಪಶ್ಚಿಮ ಮತ್ತು ಉತ್ತರ ಭಾಗ ಕದಂಬಳಿಗೆ ೧೦೦೦ ಪ್ರಾಂತದಲ್ಲಿ ಸೇರಿತ್ತು.

ಅನಂತರದ ಕಾಲದಲ್ಲಿ ಚಿತ್ರದುರ್ಗವು ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ಕಲಚೂರ್ಯರು, ಹೊಯ್ಸಳರು, ಆಮೇಲೆ ವಿಜಯನಗರದವರು, ಈ ಚಕ್ರವರ್ತಿಗಳ ಅಧೀನರಾಗಿದ್ದ ಸಾಮಂತ ಅರಸರ ಆಳ್ವಿಕೆಗೆ ಸೇರಿತ್ತು. ವಿಜಯನಗರ ಕಾಲದಲ್ಲೇ ಕಾಮಗೇತಿ ವಂಶದ ಚಿತ್ರದುರ್ಗ ನಾಯಕರು ಇಲ್ಲಿ ಆಳ್ವಿಕೆಯನ್ನು ಪ್ರಾರಂಭಿಸಿದರು. ಮೂಲಪುರುಷ ತಿಮ್ಮಣ್ಣನಾಯಕನಿಂದ ಹಿಡಿದು, ಚಿಕ್ಕಣ್ಣನಾಯಕ, ಬರಮಣ್ಣನಾಯಕ, ಹಿರೇಮದಕೇರಿನಾಯಕ, ಕೊನೆಯ ಮದಕೇರಿನಾಯಕರವರೆಗೆ ಈ ನಾಯಕರು ಸುಮಾರು ೨೩೧ವರ್ಷ ಚಿತ್ರದುರ್ಗ ರಾಜ್ಯವನ್ನು ಆಳಿದ್ದಾರೆ. ಚಿತ್ರದುರ್ಗದ ಕೋಟೆ ಬಲಿಷ್ಠವಾದ ಕೋಟೆಯಾದದ್ದು, ಹೆಸರಾಂತ ಧಾರ್ಮಿಕ ಕೇಂದ್ರವಾದ ಮುರುಘರಾಜೇಂದ್ರ ಮಠ ಇಲ್ಲಿ ಆದದ್ದು ಇವರ ಕಾಲದಲ್ಲಿಯೆ. ಚಿತ್ರದುರ್ಗ ಅವರ ಅನಂತರದಲ್ಲಿ ಕೆಲಕಾಲ ಹೈದರ್ ಮತ್ತು ಟಿಪ್ಪು ಅವರ ಆಳ್ವಿಕೆಯಲ್ಲಿ ಬಂದು, ಮೈಸೂರು ಸಂಸ್ಥಾನದ ಭಾಗವಾಯಿತು. ಕಡೆಗೆ ಮೈಸೂರಿನ ದೊರೆಗಳಿಗೆ ಸೇರಿ, ಮುಂದೆ ಕೆಲಕಾಲ ಬ್ರಿಟಿಷ್ ಕಮೀಷನರ್ ಆಡಳಿತಕ್ಕೆ ಒಳಪಟ್ಟಿತಾದರೂ ಮತ್ತೆ ಮೈಸೂರು ದೊರೆಗಳ ಆಳ್ವಿಕೆಗೇ ಬಂದಿತು. ಅನಂತರ ಬ್ರಿಟಿಷರ ಗುಲಾಮಗಿರಿಯಿಂದ ಬಿಡಿಸಿಕೊಳ್ಳಬೇಕೆಂಬ ಸ್ವಾತಂತ್ರ್ಯ ಹೋರಾಟ ಇಡೀ ದೇಶದಲ್ಲಿ ಆರಂಭವಾದಂತೆ ೨೦ನೆಯ ಶತಮಾನದ ಆರಂಭದಲ್ಲಿ ಇಲ್ಲಿಯೂ ಆರಂಭವಾಯಿತು. ದೇಶದ ಸ್ವಾತಂತ್ರ್ಯ ಹೋರಾಟ ಕಾಲದ ಅನೇಕ ಘಟನೆಗಳು ನಮ್ಮನ್ನು ಇಂದಿಗೂ ರೋಮಾಂಚನಗೊಳಿಸುತ್ತವೆ. ದೇಶದ ದಾಸ್ಯ ಬಿಡಿಸಲು ನಮ್ಮ ಹಿರಿಯರು ಎಂಥೆಂಥ ಸಾಹಸಗಳನ್ನು ಮಾಡಿದರು? ಏನೇನು ತ್ಯಾಗ ಮಾಡಿದರು? ತಮ್ಮ ಜೀವಗಳನ್ನೇ ಹೇಗೆ ಪಣವಾಗಿಟ್ಟರು, ಇಲ್ಲಿನ ಜನರು ವಯಸ್ಸು ಜಾತಿ ಅಂತಸ್ತು ಮತ್ತು ಲಿಂಗಭೇದವಿಲ್ಲದೆ ದೇಶದ ಬೃಹತ್



ಚಳುವಳಿಯಲ್ಲಿ ಪಾಲ್ಗೊಂಡರು. ತಮ್ಮ ತನು ಮನ ಧನ ಅರ್ಪಿಸಿ ಹೋರಾಟ ಮಾಡಿದರು; ದೇಶಕ್ಕೆ ಸ್ವಾತಂತ್ರ್ಯ ತಂದು ಕೊಟ್ಟು ರಾಷ್ಟ್ರಪ್ರೇಮ ಮೆರೆದರು ಎಂಬುದನ್ನು ಓದಿದಾಗ ಕೇಳಿದಾಗ ನಮ್ಮ ಮನಸ್ಸು ನಿಬ್ಬೆರಗಾಗುತ್ತದೆ, ರೋಮಾಂಚನಗೊಳ್ಳುತ್ತದೆ. ಅವರು ದೇಶಕ್ಕಾಗಿ ಏನೆಲ್ಲ ಕಷ್ಟಪಟ್ಟರು ಎಂದು ಗೌರವದಿಂದ ತಲೆಬಾಗುತ್ತದೆ.

ದೇಶದ ಇತಿಹಾಸದಲ್ಲಿ ಸಾವಿರಾರು ರೋಚಕ ಘಟನೆಗಳು ಸಂಭವಿಸಿರುವುವಾದರೂ ನಮ್ಮ ಜಿಲ್ಲೆಯಲ್ಲಿಯೂ ನಮ್ಮ ಹಿರಿಯರು ಕೂಡಾ ಅಂತಹ ಹೋರಾಟ ಮಾಡಿದ್ದರು ಎನ್ನುವುದು ನಮಗೆ ಅಭಿಮಾನದ ವಿಷಯ. ದೇಶದಲ್ಲಿ ಗಾಂಧೀಜಿ ಮತ್ತಿತರರ ನೇತೃತ್ವದಲ್ಲಿ ೧೯ನೆಯ ಶತಮಾನದ ಕೊನೆಯ ಭಾಗದಲ್ಲಿ ಸ್ವಾತಂತ್ರ್ಯ ಹೋರಾಟ ಆರಂಭಗೊಂಡಿದ್ದರೂ ೨೦ನೆಯ ಶತಕದ ಆರಂಭದಲ್ಲಿ ಹೋರಾಟ ತೀವ್ರಗೊಂಡು ದೇಶದ ಮೂಲೆಗಳಿಗೂ ಹರಡಿತು. ದೇಶೀಯ ಸಂಸ್ಥಾನವಾಗಿದ್ದ ಮೈಸೂರು ಸಂಸ್ಥಾನದಲ್ಲಿ ಸ್ವಾತಂತ್ರ್ಯ ಚಳುವಳಿ ಸ್ವಲ್ಪ ತಡವಾಗಿಯೆ ೧೯೨೦ರ ನಂತರದಲ್ಲಿ ಆರಂಭಗೊಂಡಿತು. ಉತ್ತರ ಭಾರತದಲ್ಲಿ ನಡೆಯುತ್ತಿದ್ದ ಚಳುವಳಿಯ ಘಟನೆಗಳನ್ನು ಸಂದರ್ಭಗಳನ್ನು ಕರ್ನಾಟಕದ ಜನ ಕುತೂಹಲದಿಂದ ಗಮನಿಸುತ್ತಿದ್ದರು. ಹೋರಾಟದ ನೇತಾರರ ಜಾಗೃತಿ ಭಾಷಣಗಳನ್ನು, ದೇಶಭಕ್ತಿಯನ್ನು ಬಡಿದೆಬ್ಬಿಸುವ ಬರಹಗಳನ್ನು, ಕವನಗಳನ್ನು ಪತ್ರಿಕೆಗಳಲ್ಲಿ ಓದುತ್ತ ಜಾಗೃತರಾಗುತ್ತಿದ್ದರು.

## ‘ತಿಲಕ ಸಂಘ’ ಸ್ಥಾಪನೆ ಹಾಗೂ ‘ಕಾನೂನುಭಂಗ ಚಳುವಳಿ’

ಚಿತ್ರದುರ್ಗ ಜಿಲ್ಲೆಯು ಪ್ರಮುಖ ರಾಜಕೀಯ ಕೇಂದ್ರಗಳಿಂದ ದೂರವಿದ್ದು ಸ್ವಾತಂತ್ರ್ಯಾಂದೋಲನದ ಕಿಡಿ ಅಷ್ಟಾಗಿ ತಾಗಿರಲಿಲ್ಲ. ಹಾಗೆ ಇದು ಬ್ರಿಟಿಷ್ ಪ್ರಭಾವಕ್ಕೆ ಒಳಗಾಗಿರಲಿಲ್ಲ. ೧೯೨೪ರಲ್ಲಿ ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನ ಕರ್ನಾಟಕ ಜನತೆಗೆ ಉತ್ಸಾಹ ಪ್ರೇರಣೆ ನೀಡಿತು. ಆ ಅಧಿವೇಶನಕ್ಕೆ ಹೋದವರಲ್ಲಿ ಚಿತ್ರದುರ್ಗದಲ್ಲಿ ವಕೀಲರಾಗಿದ್ದ ಹರಿಹರ ಗುಂಡೂರಾಯರೂ ಒಬ್ಬರು. ಅಧಿವೇಶನದಿಂದ ವಾಪಸಾದ ನಂತರ ಅವರು ಚಿತ್ರದುರ್ಗದಲ್ಲಿಯೂ ಸ್ವಾತಂತ್ರ್ಯ ಹೋರಾಟದ ಕಿಡಿ ಹಚ್ಚಿದರು. ಸ್ವಾತಂತ್ರ್ಯ ಹೋರಾಟ ಆರಂಭಿಸಿದ ನೇತಾರರಲ್ಲಿ ಅವರು ಪ್ರಮುಖರು. ಅವರು ದೇಶಭಕ್ತಿ ಇರುವವರನ್ನು ಸೇರಿಸಿಕೊಂಡು ‘ತಿಲಕ ಸಂಘ’ ಎಂಬ ಸಂಸ್ಥೆಯನ್ನು ಆರಂಭಿಸಿದರು. ಅನೇಕ

ದೇಶಭಕ್ತ ಸ್ವಯಂಸೇವಕರನ್ನು ತಯಾರು ಮಾಡಿದರು. ಅದರಲ್ಲಿ ಚಿತ್ರದುರ್ಗದ ಪ್ರಮುಖ ನೇತಾರರಾದ ಎಸ್. ನಿಜಲಿಂಗಪ್ಪನವರು, ಬಳ್ಳಾರಿ ಸಿದ್ದಮ್ಮ, ವಾಸುದೇವರಾವ್, ಕೆ. ಸಿ. ರೆಡ್ಡಿ, ರಾಜಶೇಖರಯ್ಯ ಹಿರೇಮಠ, ನಾಗರತ್ನಮ್ಮ ಹಿರೇಮಠ, ಕಾಸಲ ಶ್ರೀನಿವಾಸ ಶೆಟ್ಟರು, ಕೊಟ್ರೆ ನಂಜಪ್ಪ, ಹುಲ್ಲೂರು ಶ್ರೀನಿವಾಸ ಜೋಯಿಸ್, ಕಾಂಗ್ರೆಸ್ ಸಿದ್ದಪ್ಪ, ಉಗ್ರಯ್ಯ, ತಿಪ್ಪಣ್ಣ, ಕೆ. ಸಂಜೀವರೆಡ್ಡಿ, ಮುಲ್ಲಂಗಿ ಗೋವಿಂದರೆಡ್ಡಿ, ರಾಮರೆಡ್ಡಿ, ಸಿದ್ದವ್ವನಹಳ್ಳಿ ಕೃಷ್ಣಶರ್ಮ ಮುಂತಾದವರು ನಿಧಾನವಾಗಿ ಸೇರಿಕೊಳ್ಳುತ್ತ ಬಂದರು. ಇವರೆಲ್ಲ ಅನೇಕ ಯುವಕರನ್ನು ಸ್ವಾತಂತ್ರ್ಯ ಚಳುವಳಿ ಕೈಗೊಳ್ಳುವಂತೆ ಪ್ರೇರೇಪಿಸಿದರು. ಗಂಡೂರಾಯರು ತಿಲಕರಂತೆ ಗಣಪತಿ ಉತ್ಸವ ಮೊದಲಾದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಿ ಸ್ಥಳೀಯರನ್ನು ಸುತ್ತಮುತ್ತಲ ಹಿರಿಯೂರು, ಚಳ್ಳಕೆರೆ, ಹೊಳಲ್ಕೆರೆ, ಹೊಸದುರ್ಗ ಮೊದಲಾದ ಪ್ರದೇಶಗಳಲ್ಲಿ ಸಂಘಟಿಸಿದರು. ಅಷ್ಟೇ ಅಲ್ಲದೆ, ವಾಚನಾಲಯ ಗ್ರಂಥಾಲಯಗಳನ್ನು ತೆರೆದು ಆ ಮೂಲಕ ದೇಶಭಕ್ತಿಯ ಕೃತಿಗಳನ್ನು ಓದುವಂತೆ ಮಾಡಿದರು. ಹಬ್ಬ ಉತ್ಸವಗಳಿಗೆ ಸಭೆಗಳನ್ನು ಮಾಡಿ ವಿದ್ವಾಂಸರನ್ನು ದೇಶಭಕ್ತರನ್ನು ಕರೆಸಿ ಭಾಷಣಗಳನ್ನು ಏರ್ಪಡಿಸಿದರು.

ಶ್ರೀ ಗುಂಡೂರಾಯರ ಮೇಲೆ ಗಾಂಧೀಜಿಯವರು ಅಪಾರ ಪ್ರಭಾವ ಬೀರಿದ್ದರು. ಆಗಲೇ ಅವರು ಗಾಂಧಿವಾದಿ ಎಂಬ ಹೆಸರನ್ನು ಪಡೆದಿದ್ದರು. ನುಡಿದಂತೆ ನಡೆಯುವ ಉನ್ನತ ಆಚಾರ ಹೊಂದಿದ ರಾಷ್ಟ್ರೀಯ ಮನೋಭಾವದ ನಾಯಕರಾಗಿದ್ದರು. ಹರಿಜನೋದ್ಧಾರ, ಪಾನನಿರೋಧ ಮೊದಲಾದ ರಚನಾತ್ಮಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಹಾಗೂ ಸ್ವಾತಂತ್ರ್ಯದ ಬಗೆಗೆ ಸಣ್ಣ ಸಣ್ಣ ಕೃತಿಗಳನ್ನು ಬರೆದು ಜನರಲ್ಲಿ ಹೋರಾಟದ ಬಗೆಗೆ ಜಾಗೃತಿ ಮೂಡಿಸಿದರು. ಗಾಂಧೀಜಿಯವರ ಕಾನೂನು ಭಂಗ ಚಳುವಳಿಯ ಅನಂತರದಲ್ಲಿ ಮೈಸೂರಿನಲ್ಲಿ ಸ್ವಾತಂತ್ರ್ಯ ಹೋರಾಟ ತೀವ್ರಗೊಂಡಿತು. ೧೯೩೦ರಲ್ಲಿ ಬೆಂಗಳೂರಿನಲ್ಲಿ ನಡೆದ ಯುವಜನ ಸಮ್ಮೇಳನದ ಮುಖ್ಯ ಉದ್ದೇಶ ಮೈಸೂರು ಸಂಸ್ಥಾನದಲ್ಲಿ ರಾಜಕೀಯ ಪ್ರಜ್ಞೆಯನ್ನು ಬೆಳೆಸಿ, ಜನತೆಗೆ ಜವಾಬ್ದಾರಿ ಸರ್ಕಾರದ ಅವಶ್ಯಕತೆಯನ್ನು ಮನಗಾಣಿಸುವುದೇ ಆಗಿತ್ತು. ಚಿತ್ರದುರ್ಗವು ಮೈಸೂರು ಸಂಸ್ಥಾನದ ಉತ್ತರ ಗಡಿಯಲ್ಲಿದ್ದು ಬ್ರಿಟಿಷ್ ಪ್ರಾಂತ್ಯಗಳೊಡನೆ ಸಂಪರ್ಕ ಹೊಂದಿತ್ತು. ಆದ್ದರಿಂದ ಉತ್ತರ ಕರ್ನಾಟಕದ ಹುಬ್ಬಳ್ಳಿ, ಬೆಳಗಾವಿ, ಧಾರವಾಡ, ಬಳ್ಳಾರಿ ಜಿಲ್ಲೆಗಳಲ್ಲಿ ನಡೆಯುತ್ತಿದ್ದ ಸ್ವಾತಂತ್ರ್ಯ ಸಂಗ್ರಾಮದ ಹೋರಾಟದ ಬಿಸಿ ಚಿತ್ರದುರ್ಗಕ್ಕೂ



ಮುಟ್ಟಿ ಸ್ವಾತಂತ್ರ್ಯ ಹೋರಾಟದ ತೀವ್ರತೆ ಇಲ್ಲೂ ಹೆಚ್ಚಾಯಿತು. ೧೯೩೧ರಲ್ಲಿ ಚಿತ್ರದುರ್ಗ ಜಿಲ್ಲೆಯಲ್ಲಿ ಸಂಚಾರ ಕೈಗೊಂಡ ಹರ್ಡೇಕರ್ ಮಂಜಪ್ಪನವರು ತಮ್ಮ ಸಹಹೋರಾಟಗಾರರೊಂದಿಗೆ ಪ್ರವಾಸ ಮಾಡಿ, ಜನರಿಗೆ ಪತ್ರಿಕೆಯ ಮೂಲಕ ಸಭೆ ಮಾಡಿ, ದೇಶಭಕ್ತಿ ಭಾಷಣದ ಮೂಲಕ ಜನಜಾಗೃತಿ ಮೂಡಿಸಿ, ಪ್ರಸಕ್ತ ರಾಜಕೀಯ ವಿದ್ಯಮಾನಗಳನ್ನು ವಿವರಿಸಿ, ಹೋರಾಟದಲ್ಲಿ ಭಾಗವಹಿಸಲು ಕರೆಯಿತ್ತರು. ಹಿಂದೆಯೇ ೧೯೨೦ರಲ್ಲಿ ಹರ್ಡೇಕರ್ ಮಂಜಪ್ಪನವರು ದಾವಣಗೆರೆಯಲ್ಲಿ ವಾಸ ಮಾಡುತ್ತಿದ್ದಾಗ 'ಭಾರತದ ರಾಷ್ಟ್ರೀಯತೆ' ಎಂಬ ಕೃತಿ ಬರೆದು ಸ್ವಾತಂತ್ರ್ಯ, ದೇಶಭಕ್ತಿ ಇವುಗಳ ಕುರಿತು ಅರಿವನ್ನು ಉಂಟು ಮಾಡಿದ್ದರು.

ಗುಂಡೂರಾಯರು 'ತಿಲಕ ಸಂಘ' ಸ್ಥಾಪಿಸಿದ ಮೇಲೆ ತಮ್ಮದೇ ಆದ ರೀತಿಯಲ್ಲಿ ಚಳುವಳಿಗೆ ಚಾಲನೆ ಕೊಟ್ಟರು. ಗೋಪಾಲಕೃಷ್ಣ ಗೋಖಲೆ ಗಾಂಧಿ ವಿಚಾರಗಳನ್ನು ತಲೆ ತುಂಬಾ ತುಂಬಿಕೊಂಡಿದ್ದರು. ಗೋಖಲೆಯವರ ವಿಚಾರಗಳೆಂದರೆ, ಯುವಜನತೆ ಜಾಗೃತರಾಗಬೇಕು, ದೇಶಪ್ರೇಮ ಬೆಳೆಸಿಕೊಳ್ಳಬೇಕು, ಸ್ವಾತಂತ್ರ್ಯಪ್ರೇಮ ಹೆಚ್ಚಿಸಬೇಕು. ಇದು ಜ್ಞಾನಪ್ರಸಾರದಿಂದ ಮಾತ್ರ ಸಾಧ್ಯ. ಆ ಮೂಲಕ ಯುವಜನತೆ ಸ್ವಾತಂತ್ರ್ಯ ಸಂಗ್ರಾಮಕ್ಕೆ ಧುಮುಕಬೇಕು, ಬ್ರಿಟಿಷರನ್ನು ಎದುರಿಸುವ ಧೈರ್ಯ ಸಾಹಸ ಪ್ರವೃತ್ತಿಗಳನ್ನು ಬೆಳೆಸಬೇಕು, ಇದಕ್ಕಾಗಿ ದೇಶಾದ್ಯಂತ ನಡೆಯುತ್ತಿರುವ ಚಳುವಳಿಯ ಬಗ್ಗೆ ಜನತೆಗೆ ಮಾಹಿತಿ ನೀಡುವುದು. ಆದರೆ ಆ ಕಾಲದಲ್ಲಿ ದುರ್ಗಕ್ಕೆ ದಿನಪತ್ರಿಕೆಗಳು ಬರುತ್ತಿದ್ದ ಸಂಖ್ಯೆ ಬಹಳ ಕಡಿಮೆ. ಊರಿನ ಪ್ರತಿಷ್ಠಿತರು, ವಕೀಲರು, ವೈದ್ಯರು, ಸರಕಾರಿ ಅಧಿಕಾರಿಗಳು ಅವನ್ನು ತರಿಸುತ್ತಿದ್ದರು. ಸಾಮಾನ್ಯ ಜನಕ್ಕೆ ಅವನ್ನು ಓದಲು ಆಗುತ್ತಿರಲಿಲ್ಲ. ಸಾರ್ವಜನಿಕರಿಗೆ ಇದ್ದ ಶಿಕ್ಷಣದ ಹಿನ್ನೆಲೆಯೂ ಅಷ್ಟಕ್ಕಷ್ಟೆ. ಅವರೆಲ್ಲ ಸುಲಭವಾಗಿ ಓದಲು ಸಾರ್ವಜನಿಕ ಪುಸ್ತಕಾಲಯವೂ ಇರಲಿಲ್ಲ, ವಾಚನಾಲಯವೂ ಇರಲಿಲ್ಲ. ಹಾಗಾಗಿ ಗುಂಡೂರಾಯರು 'ತಿಲಕ ಸಂಘ' ಸ್ಥಾಪಿಸುವ ಮುನ್ನವೇ ಮನೆಮನೆಗೆ ಹೋಗಿ ಪುಸ್ತಕ ಪತ್ರಿಕೆ ಓದಿ ಹೇಳುವ ಪರಿಪಾಠ ಮಾಡುತ್ತಿದ್ದರು. 'ತಿಲಕ ಸಂಘ' ಸ್ಥಾಪನೆ ನಂತರ ಉಚಿತ ವಾಚನಾಲಯ ಆರಂಭವಾಯಿತು; ಪುಸ್ತಕ ಭಂಡಾರ ಆರಂಭವಾಯಿತು. ಅಲ್ಲಿ ಪ್ರಚಲಿತ ಸಮಸ್ಯೆಗಳನ್ನು ಕುರಿತ ವಿಚಾರಗೋಷ್ಠಿ, ಚರ್ಚಾಕೂಟಗಳು ಏರ್ಪಾಡಾಗುತ್ತಿದ್ದವು. ತಿಲಕರು ಪುಣೆಯಲ್ಲಿ ನಡೆಸಿದಂತೆ ದುರ್ಗದಲ್ಲಿ ಗಣಪತಿ ಉತ್ಸವ, ಭಗವದ್ಗೀತೆಯ

ಪಠಣ– ಹೀಗೆ ಚಿತ್ರದುರ್ಗದಲ್ಲಿ ಸಾಂಸ್ಕೃತಿಕ ಚಟುವಟಿಕೆಗಳು ಆರಂಭವಾದುವು. ಯುವಕರೆಲ್ಲ ಒಂದಾಗಲು, ಸ್ವಾತಂತ್ರ್ಯ ಚಳುವಳಿ ನಡೆಯಲು ಆ ವೇದಿಕೆ ಪ್ರೇರಣೆಯಾಯಿತು. ಅಲ್ಲಿ ವಿಚಾರಸಂಕಿರಣ, ಚರ್ಚಾಸ್ಪರ್ಧೆ, ಭಾಷಣಗಳು, ಉಪನ್ಯಾಸ, ಹರಿಕಥೆ ನಡೆಯಲಾರಂಭಿಸಿದವು. ಆಗ ಪ್ರಸಿದ್ಧ ಭಾಷಣಕಾರರೂ ನೇತಾರರೂ ಆದ ಆಲೂರು ವೆಂಕಟರಾವ್, ಡಾ. ಭಾರದ್ವಾಜ್, ಆರ್. ಆರ್. ದಿವಾಕರ್, ಹರ್ಡೇಕರ್ ಮಂಜಪ್ಪ ಮುಂತಾದ ನೇತಾರರನ್ನು ಕರೆಸಿ ಸ್ವಾತಂತ್ರ್ಯ ಕುರಿತ ಭಾಷಣಗಳನ್ನು ಏರ್ಪಡಿಸಲಾರಂಭಿಸಿದರು. ಹೀಗೆ ಚಿತ್ರದುರ್ಗದಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಅಡಿಪಾಯ ಹಾಕಲ್ಪಟ್ಟಿತು.

ಗುಂಡೂರಾಯರು, ವಾಸುದೇವ ರಾಯರು ಹಾಗೂ ಕಾಸಲ ಶ್ರೀನಿವಾಸ ಶೆಟ್ಟರು, ಬೆಲ್ಲದ ಸಿದ್ಲಿಂಗಪ್ಪ, ಚೆನ್ನಪ್ಪ, ಟಿ. ಎಸ್. ವೆಂಕಟಗಿರಿರಾಯರು ಮುಂತಾದವರು ಗಾಂಧಿಯವರ ಖಾದಿಪ್ರೇಮದ ವಿಚಾರಧಾರೆಯಿಂದ ಪ್ರೇರಿತರಾಗಿ 'ಖಾದಿ ಚಳುವಳಿ'ಯನ್ನು ಪ್ರಾರಂಭಿಸಿ ಧಾರವಾಡಕ್ಕೆ ಹೋಗಿ, ಚರಕದಿಂದ ನೂಲು ತೆಗೆಯುವುದನ್ನು ಕಲಿತು, ಚರಕಗಳನ್ನು ತಯಾರು ಮಾಡಿಸಿ, ಅದರಿಂದ ತಯಾರಿಸಿದ ನೂಲಿನಿಂದ ತಮ್ಮ ಬಟ್ಟೆಯನ್ನು ನೇಯಿಸಿಕೊಂಡು ಹಾಕತೊಡಗಿದರು. ವಿದೇಶಿ ವಸ್ತ್ರಗಳನ್ನು ತ್ಯಜಿಸಿ ಖಾದಿ ತೊಡುವಂತೆ ಯುವಕರನ್ನು ಪ್ರೇರೇಪಿಸಿದರು. 'ಖಾದಿಯ ಮಹಿಮೆ' ಎಂಬ ಪುಸ್ತಕವನ್ನು ಬರೆದರು. 'ತಿಲಕ ಸಂಘ'ದ ವತಿಯಿಂದ ಗಣೇಶೋತ್ಸವ ಸಂದರ್ಭದಲ್ಲಿ ಆಲೂರು ವೆಂಕಟರಾಯರನ್ನು ಕರೆಸಿ, ವಿದೇಶಿ ವಸ್ತ್ರ ತ್ಯಜಿಸಿ ಖಾದಿ ತೊಡುವ ಬಗ್ಗೆ ಭಾಷಣ ಮಾಡಿಸಿದರು. ಆಗ ಹಿರಿಯೂರಿನ ರಾಮದಾಸರೆಂಬ ಮಹನೀಯರೊಬ್ಬರು ನಿಂತ ನಿಲುವಿನಲ್ಲಿಯೆ ವಿದೇಶಿ ಬಟ್ಟೆ ತ್ಯಜಿಸಿ ಕೇವಲ ಲಂಗೋಟಿ ಮೇಲೆ ಖಾದಿಪಂಚೆ ಖಾದಿಶಲ್ಯ ಧರಿಸಿದರು. ಆಗ ಅದನ್ನು ನೋಡಿದ ಅನೇಕರು ತಾವೂ ಸ್ವದೇಶಿಗಳಾಗುತ್ತೇವೆ ಎಂದು ಪ್ರತಿಜ್ಞೆ ಮಾಡಿದರು. ಅಂದಿನ ಸಭಿಕರು ಮಂಗಳಾರತಿ ಪೂಜೆಗೆ ತಾವು ಧರಿಸಿದ ಚಿನ್ನದ ಬಳೆ, ಸರ, ಓಲೆ, ಉಂಗುರಗಳನ್ನು ಸ್ವಾತಂತ್ರ್ಯ ಸಂಗ್ರಾಮಕ್ಕೆ ಕಾಣಿಕೆಯಾಗಿ ಕೊಟ್ಟು ತಾವು ಪಾಲ್ಗೊಂಡಂತೆ ಸಂಭ್ರಮಿಸಿದರು. ವಿದೇಶಿ ವಸ್ತುಗಳ ಉಚ್ಚಾಟನೆಯ ಅಂಗವಾಗಿ ದುರ್ಗದಲ್ಲಿ ಒಂದು ಕಾರ್ಯಕ್ರಮ ಏರ್ಪಡಿಸಿ ವಿದೇಶಿ ವಸ್ತು ಬಟ್ಟೆಗಳನ್ನು ಸಂಗ್ರಹಿಸಿ ಚಿತ್ರದುರ್ಗ ಕಾಮನಬಾವಿ ಉತ್ಸವಾಂಬ ಗುಡಿಯ ಬಳಿ, ಮಧ್ಯೆ ರಸ್ತೆಗಳು ಸೇರುವ ಚೌಕದಲ್ಲಿ ಆ ಬಟ್ಟೆ ವಸ್ತ್ರಗಳನ್ನು ಸುಟ್ಟರು.



ವಿದೇಶಿ ವಸ್ತುಗಳ ವಿರುದ್ಧ ಪಿಕೆಟಿಂಗ್ ಪ್ರಾರಂಭವಾಯಿತು. ಇಡೀ ಜಿಲ್ಲೆಯಾದ್ಯಂತ ಖಾದಿಕೇಂದ್ರಗಳು ಪ್ರಾರಂಭವಾದುವು. ಕಾಸಲ ಶ್ರೀನಿವಾಸ ಶೆಟ್ಟರ ನೇತೃತ್ವದಲ್ಲಿ ವಿದೇಶಿ ವಸ್ತ್ರ ಮಾರುವ ಅಂಗಡಿಗಳ ಮಾಲೀಕರ ಮನ ಒಲಿಸಿ ಇನ್ನು ಮುಂದೆ ವಿದೇಶಿ ಬಟ್ಟೆಗಳನ್ನು ತರಿಸುವುದಿಲ್ಲವೆಂದು ವಾಗ್ದಾನ ಪಡೆದುಕೊಂಡರು. ಬೆಲ್ಲದ ಸಿದ್ಲಿಂಗಪ್ಪ, ಚೆನ್ನಪ್ಪ, ನಂಜುಂಡಯ್ಯ, ಶ್ರೀನಿವಾಸ ಶಾಸ್ತ್ರಿ ಮುಂತಾದ ಅನೇಕರು ಸ್ವದೇಶಿ ವಸ್ತುಗಳ ಮಹತ್ತ್ವ ಸಾರತೊಡಗಿದರು. ಅದರ ಪರಿಣಾಮ ರಾಜ್ಯದಲ್ಲೆ ಮೊತ್ತಮೊದಲ ಖಾದಿಕೇಂದ್ರ ಚಿತ್ರದುರ್ಗದ ಬಳಿಯ ಮೆದಕೇರಿಪುರ ಗ್ರಾಮದಲ್ಲಿ ಆರಂಭವಾಯಿತು.

೧೯೩೨ರ 'ಕಾನೂನು ಭಂಗ ಚಳುವಳಿ' ಇಲ್ಲಿ ಬಲವಾಗಿಯೇ ಪ್ರಾರಂಭವಾಯಿತು. ೧೯೩೧ರ ಅಂತ್ಯಭಾಗದಲ್ಲಿ ಸ್ವಾತಂತ್ರ್ಯಯೋಧ ಹರ್ಡೇಕರ್ ಮಂಜಪ್ಪನವರು ಚಿತ್ರದುರ್ಗಕ್ಕೆ ಭೇಟಿ ನೀಡಿ ಬ್ರಿಟಿಷ್ ಕರ್ನಾಟಕದ ರಾಜಕೀಯ ಪರಿಸ್ಥಿತಿಯನ್ನು ಇಲ್ಲಿಯ ಜನತೆಗೆ ಪರಿಚಯ ಮಾಡಿಕೊಟ್ಟರು. ಇವರ ಜೊತೆ ಬಂದ ತುಮಕೂರಿನ ಕಾಂಗ್ರೆಸ್ ನಾಯಕ ಡಿ. ಎಸ್. ಮಲ್ಲಪ್ಪನವರು ಜನತೆಗೆ ಪ್ರಜಾಸರ್ಕಾರದ ಕಾರ್ಯವಿಧಾನಗಳನ್ನು ಮತ್ತು ಸಂಸ್ಥಾನದಲ್ಲಿ ಅದರ ಅವಶ್ಯಕತೆಯನ್ನು ವಿವರಿಸಿದರು.

೧೯೩೨ರ 'ಕಾನೂನು ಭಂಗ ಚಳುವಳಿ'ಯಲ್ಲಿ ಜಿಲ್ಲೆಯ ಜನರು ಭಾರಿ ಪ್ರಮಾಣದಲ್ಲಿ ಭಾಗವಹಿಸಿದರು. ದಾವಣಗೆರೆ, ಚಿತ್ರದುರ್ಗ, ಹರಿಹರ, ಹೊಸದುರ್ಗ ಇವುಗಳಲ್ಲಿ ಖಾದಿ ವಸ್ತ್ರಾಲಯಗಳಾಗಿ ಅವು ಚಳುವಳಿಯ ಕೇಂದ್ರಗಳಾದುವು. ಜನ ವಿದೇಶಿ ವಸ್ತ್ರಗಳನ್ನು ಬಹಿಷ್ಕರಿಸಲು ವ್ಯಾಪಕ ಹೋರಾಟ ನಡೆಸಿದರು. ದಾವಣಗೆರೆ ಹೊಸದುರ್ಗಗಳಲ್ಲಿ ಸಭೆ ನಡೆದವು. ಅದೇ ದಿನ ಚಳ್ಳಕೆರೆ, ಹರಿಹರಗಳಲ್ಲೂ ಹರತಾಳ ನಡೆದವು. ಚಳ್ಳಕೆರೆಯ ಹನುಮಂತಪ್ಪ, ಗ್ರಾಮಸ್ಥರು ಸರ್ಕಾರದ ಕೆಲಸಗಳನ್ನು ಮಾಡಬಾರದೆಂದು ಮನವಿ ಮಾಡಿದಾಗ ಆತನನ್ನು ಬಂಧಿಸಿ ಶಿಕ್ಷೆ ನೀಡಲಾಯಿತು. ಈ ಚಳುವಳಿಯಲ್ಲಿ ಭಾಗವಹಿಸಿ ಅದನ್ನು ಸಮರ್ಪಕ ರೀತಿಯಲ್ಲಿ ನಡೆಸಿದ ಶ್ರೀನಿವಾಸ ಶಾಸ್ತ್ರಿ, ಬೆಲ್ಲದ ಸಿದ್ಲಿಂಗಪ್ಪ, ಶಿವಗಂಗಯ್ಯ ಇತರರು ಈ ಚಳುವಳಿಗಳನ್ನು ಶಾಂತರೀತಿಯಲ್ಲಿ ಮತ್ತು ಕಾನೂನಿನ ಚೌಕಟ್ಟಿನಲ್ಲಿಯೇ ನಡೆಸಿದ್ದರೂ ಜಿಲ್ಲೆಯ ಉನ್ನತ ಪೊಲೀಸ್ ಅಧಿಕಾರಿಗಳು ಚಳುವಳಿಗಾರರಿಗೆ ಎಚ್ಚರಿಕೆ ನೀಡಿದ್ದರು.

೧೯೩೨ರ ಮಾರ್ಚ್ ತಿಂಗಳಿನಲ್ಲಿ ಹೋಳಿಹಬ್ಬದ ಸಂದರ್ಭ ಚಿತ್ರದುರ್ಗ ದಾವಣಗೆರೆಗಳಲ್ಲಿ ಮತ್ತೆ ವಿದೇಶಿ ವಸ್ತ್ರಗಳ ದಹನ ಮಾಡಿದರು. ದೇಶಪ್ರೇಮಿಗಳ ಸಭೆ ಚಿತ್ರದುರ್ಗದ ಜಯದೇವ ವಿದ್ಯಾರ್ಥಿ ನಿಲಯದಲ್ಲಿ ನಡೆಯಿತು. ಷಡಾಕ್ಷರಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಎಸ್. ನಿಜಲಿಂಗಪ್ಪನವರು ಧ್ವಜಾರೋಹಣ ಮಾಡಿದರು. ಬ್ರಿಟಿಷರ ಪರವಾಗಿದ್ದ ದಿವಾನರ ಭಾಷಣ ಖಂಡಿಸಿದರು. ಬಳ್ಳಾರಿಯಿಂದ ಚಿತ್ರದುರ್ಗಕ್ಕೆ ಮೇ ತಿಂಗಳಲ್ಲಿ ಬಂದ ನಾಟಕ ಕಂಪನಿಯೊಂದಕ್ಕೆ ನಾಟಕ ಮಾಡದಂತೆ ಪ್ರತಿಬಂಧಿಸಲಾಯಿತು. ಆ ನಾಟಕ ಕಂಪನಿಯು ಪಾನನಿರೋಧ, ಸ್ವದೇಶಿ ಮತ್ತು ರಾಷ್ಟ್ರೀಯತೆಯ ವಿಷಯವಾಗಿ ನಾಟಕ ಮಾಡುತ್ತಿದೆ ಎಂದು ಆಪಾದಿಸಲಾಯಿತು. ಜನರು ಸರ್ಕಾರದ ವಿರುದ್ಧವಾದ ವಿಷಯಗಳ ಬಗ್ಗೆ ಮಾತನಾಡಿದರೆ, ನಾಟಕವಾಡಿದರೆ ಸರ್ಕಾರ ಕಾನೂನುಕ್ರಮ ಕೈಗೊಳ್ಳುತ್ತಿತ್ತು.

## ಗಾಂಧೀಜಿ ಭೇಟಿ ಹಾಗೂ ಕಾಂಗ್ರೆಸ್ ಸಮಿತಿಯ ಸ್ಥಾಪನೆ

೧೯೩೪ರ ಮಾರ್ಚ್ ತಿಂಗಳಲ್ಲಿ ಗಾಂಧಿಜಿಯವರು ಮೈಸೂರು ಸಂಸ್ಥಾನಕ್ಕೆ ಬಂದು ಹಲವಾರು ಜಿಲ್ಲೆಗಳಿಗೆ ಭೇಟಿ ಕೊಟ್ಟದ್ದು ಸ್ವಾತಂತ್ರ್ಯ ಚಳುವಳಿಗೆ ವಿಶೇಷ ಪ್ರಚೋದನೆ ದೊರಕಿತು. ಮಾರ್ಚ್ ೨ರಂದು ಗಾಂಧೀಜಿಯವರು ದಾವಣಗೆರೆಗೆ ಬಂದು ಜನತೆಯನ್ನುದ್ದೇಶಿಸಿ ಮಾತನಾಡಿದರು. ಅವರ ಭಾಷಣದಿಂದ ಪ್ರಭಾವಿತರಾದ ನೂರಾರು ಜನರು, ಸಂಘ–ಸಂಸ್ಥೆಗಳು ಅವರಿಗೆ ಬಿನ್ನವತ್ತಳೆಯನ್ನೂ ನಿಧಿಯನ್ನೂ ಅರ್ಪಿಸಿದರು. ಸ್ವಾತಂತ್ರ್ಯ ಗಳಿಸುವವರೆಗೂ ಹೋರಾಟ ನಿಲ್ಲಿಸುವುದಿಲ್ಲ ಎಂದು ಮಾತು ಸಹ ಕೊಟ್ಟರು. ಇದೇ ಸಂದರ್ಭದಲ್ಲಿ ಗಾಂಧೀಜಿಯವರು ಚಿತ್ರದುರ್ಗದ ಮುರುಘರಾಜೇಂದ್ರ ಬೃಹನ್ಮಠದ ಜಗದ್ಗುರುಗಳಾದ ಜಯದೇವ ಸ್ವಾಮಿಗಳನ್ನು ಹಾವೇರಿಯ ಶಾಖಾಮಠದಲ್ಲಿ ಭೇಟಿ ಮಾಡಿ ದೇಶದ ಬಗೆಗೆ, ಸ್ವಾತಂತ್ರ್ಯ ಸಂಗ್ರಾಮದ ಬಗೆಗೆ, ಅಸ್ಪೃಶ್ಯತೆ ನಿವಾರಣೆಯ ಬಗೆಗೆ, ಹರಿಜನರ ಮತ್ತು 'ಹರಿಜನ' ಹೆಸರಿನ ಬಗೆಗೆ ವಿಚಾರ ವಿನಿಮಯ ನಡೆಸಿದರು. ಅಸ್ಪೃಶ್ಯತೆಯ ಬಗೆಗೆ ಶರಣ ಬಸವೇಶ್ವರರು ಬಹುಹಿಂದೆಯೇ ಅಸ್ಪೃಶ್ಯೋದ್ಧಾರ ಕೈಕೊಂಡಿದ್ದುದರ ವಿಚಾರವನ್ನು ತಿಳಿಸಿ, ಜಯದೇವ ಜಗದ್ಗುರುಗಳು ಸ್ವಾತಂತ್ರ್ಯ ಸಂಗ್ರಾಮದ ಬಗ್ಗೆ ಸಂಪೂರ್ಣ ಬೆಂಬಲ ಸೂಚಿಸಿದರು. ಜೊತೆಗೆ, ಗಾಂಧೀಜಿಯವರ ಆಶಯದಂತೆ ಖಾದಿಬಟ್ಟೆಯನ್ನು



ತೊಡಲಾರಂಭಿಸಿದರು. ಹಾಗೇ ತಮ್ಮಲ್ಲಿ ಬರುವ ಭಕ್ತಾದಿಗಳಿಗೆ ಸ್ವಾತಂತ್ರ್ಯದ ಪ್ರಾಮುಖ್ಯದ ಬಗ್ಗೆ ಹೇಳಲಾರಂಭಿಸಿದರು. ಇದರಿಂದ ದೊಡ್ಡ ಮಠಾಧಿಪತಿಯೊಬ್ಬರು ಸ್ವಾತಂತ್ರ್ಯ ಹೋರಾಟಕ್ಕೆ ಕೈಜೋಡಿಸಿದಂತಾಯಿತು. ಇದೇ ಸಂದರ್ಭದಲ್ಲಿ ಮುಂಬಯಿಯ ಮೇಯರ್ ಕೆ. ಎಫ್. ನಾರಿಮನ್ ಅವರು ಮೈಸೂರು ಸಂಸ್ಥಾನಕ್ಕೆ ಭೇಟಿ ಕೊಟ್ಟರು. ಅವರು ಹರಿಹರ ದಾವಣಗೆರೆಗಳಲ್ಲಿ ಭಾಷಣ ಮಾಡಿ ಜವಾಬ್ದಾರಿ ಸರ್ಕಾರಕ್ಕಾಗಿ ಹೋರಾಟ ನಡೆಸಬೇಕೆಂದು ಕರೆ ಕೊಟ್ಟರು. ಆಗ ಮೊಳಕಾಲ್ಮುರು ಚಳ್ಳಕೆರೆ ದಾವಣಗೆರೆಗಳಲ್ಲಿ ಧ್ವಜಾರೋಹಣಕ್ಕೆ ಪ್ರತಿಬಂಧಕಾಜ್ಞೆಯನ್ನು ಹಾಕಿ ೧೪೪ನೆಯ ಸೆಕ್ಷನ್ ಜಾರಿ ಮಾಡಲಾಯಿತು.

ಚಿತ್ರದುರ್ಗದಲ್ಲಿ ಭಾಷಣ ಮಾಡಲು ಬಂದ ಡಾ. ಪಟ್ಟಾಭಿರಾಮಯ್ಯ ಅವರಿಗೆ ಭಾಷಣ ಮಾಡಲು ಸರ್ಕಾರ ಅನುಮತಿ ನೀಡಲಿಲ್ಲ. ಚಳುವಳಿಗಾರರು ೧೯೩೬ರ ಜನವರಿ ೨೬ರಂದು ಜಿಲ್ಲೆಯ ಪ್ರಮುಖ ಕೇಂದ್ರಗಳಲ್ಲಿ ಸ್ವಾತಂತ್ರ್ಯ ದಿನಾಚರಣೆ ಆರಂಭಿಸಿದರು. ಅಂದೇ ಜಿಲ್ಲಾಧಿಕಾರಿಗಳು ೨ ತಿಂಗಳ ಕಾಲ ರಾಷ್ಟ್ರಧ್ವಜ ಹಾರಿಸದಂತೆ ಪ್ರತಿಬಂಧಕಾಜ್ಞೆ ವಿಧಿಸಿದರು. ಅದರ ಅಡಿಯಲ್ಲಿ ದಿ. ೦೬–೧೧–೧೯೩೭ರಂದು ಕಾಂಗ್ರೆಸ್ ನಾಯಕ ಎಚ್. ಸಿ. ದಾಸಪ್ಪ, ಸಿದ್ಲಿಂಗಯ್ಯ ಅವರನ್ನು ಬಂಧಿಸಿ ಕೋರ್ಟಿಗೆ ಹಾಜರುಪಡಿಸಲಾಯಿತು. ಕೊಟ್ರೆನಂಜಪ್ಪ, ಗಂಗಮ್ಮ, ಹನುಮಂತಪ್ಪ ಮುಂತಾದವರನ್ನು ಸರ್ಕಾರದ ಆಜ್ಞೆ ಉಲ್ಲಂಘಿಸಿದ್ದಕ್ಕೆ ಬಂಧಿಸಲಾಯಿತು. ಕೆಂಚಪ್ಪ, ಭೀಮಪ್ಪನಾಯಕರು ಭಾಷಣ ಮಾಡದಂತೆ ಜಿಲ್ಲಾ ನ್ಯಾಯಾಧೀಶರು ಆಜ್ಞೆ ಹೊರಡಿಸಿದರು. ಕಾಸಲ ಶ್ರೀನಿವಾಸ ಶೆಟ್ಟಿ ಮತ್ತು ಹರಿಹರ ಗುಂಡೂರಾಯರನ್ನು ಬಂಧಿಸಲಾಯಿತು.

೧೯೩೬ರಲ್ಲಿ ಕಾಂಗ್ರೆಸ್ ಪಕ್ಷವು ಕರ್ನಾಟಕ ಸಂಸ್ಥಾನದಲ್ಲಿ ಕಾಂಗ್ರೆಸ್‌ನ ಧ್ಯೇಯ ಧೋರಣೆಗಳನ್ನು ಜನರಿಗೆ ತಿಳಿಸಲು ಒಂದು ಸಮಿತಿಯನ್ನು ರಚಿಸಿತು. ಈ ಸಮಿತಿಯ ಸದಸ್ಯರಾದ ಟಿ. ಸಿದ್ಧಲಿಂಗಯ್ಯ, ವೀರಕೇಸರಿ ಸೀತಾರಾಮಶಾಸ್ತ್ರಿ ಮತ್ತು ತಗಡೂರು ರಾಮಚಂದ್ರರಾಯರು ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡರು. ಬೇರೆ ಬೇರೆ ಸ್ಥಳಗಳಲ್ಲಿ ಜನರು ಕಾಂಗ್ರೆಸ್ ಸಂಸ್ಥೆಗೆ ನಿಧಿಯನ್ನು ಅರ್ಪಿಸಿದರು. ಎಸ್. ನಿಜಲಿಂಗಪ್ಪನವರು ಜಿಲ್ಲೆಯಲ್ಲಿ ಕಾಂಗ್ರೆಸ್ ಚಳುವಳಿಯ ಜವಾಬ್ದಾರಿ ಹೊತ್ತುಕೊಂಡರು. ಕಾಂಗ್ರೆಸ್ ಪಕ್ಷದ ಧ್ಯೇಯೋದ್ದೇಶಗಳನ್ನು ಜನರಲ್ಲಿ ಪ್ರಚಾರ ಮಾಡಲು ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡರು.

ಹರಿಹರದ ಗುಂಡೂರಾಯರು ಚಿತ್ರದುರ್ಗದಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಕಹಳೆಯೂದಿ ಜಿಲ್ಲೆಯ ಜನರನ್ನು ಸಂಘಟಿಸಿ ವೇದಿಕೆಯೊಂದನ್ನು ಹುಟ್ಟುಹಾಕಿ ಜನರನ್ನು ಹೋರಾಟಕ್ಕೆ ಸಿದ್ಧಪಡಿಸುವ ಪ್ರಮುಖ ಕೆಲಸ ಮಾಡಿದರೆ, ಎಸ್. ನಿಜಲಿಂಗಪ್ಪನವರು ಅದನ್ನು ಯಶಸ್ವಿಯಾಗಿ ಮುಂದುವರಿಸಿದರು. ಎಸ್. ನಿಜಲಿಂಗಪ್ಪ ಅತ್ಯಂತ ಪ್ರತಿಭಾವಂತ ವಕೀಲರಾಗಿ ಚಿತ್ರದುರ್ಗದಲ್ಲಿ ತಮ್ಮ ವಕೀಲಿಕೆಯನ್ನು ಪ್ರಾರಂಭಿಸಿದರು. ಬ್ರಿಟಿಷರ ರಾಜ್ಯಭಾರದೊಡನೆ ಕಾಯಿದೆ ಕಾನೂನು ಮುಂತಾದವುಗಳು ಸ್ಥಾಪಿತವಾದಾಗ ನಾಡಿನ ಸ್ವಾತಂತ್ರ್ಯ ಸಾಧನೆಯು ನಡೆಯಬೇಕೆಂಬ ಇಚ್ಛೆಯಿಂದ ಆಂಗ್ಲ ವಿದ್ಯಾಭ್ಯಾಸ ಪಡೆದ ಹಿರಿಯ ರಾಜಕಾರಣಿಗಳಲ್ಲಿ ಹೆಚ್ಚು ಮಂದಿ ವಕೀಲರೇ ಆಗಿದ್ದರು. ವಕೀಲ ವೃತ್ತಿಯು ಸ್ವತಂತ್ರ ವೃತ್ತಿಯಷ್ಟೇ ಆಗಿರದೆ ಸರ್ಕಾರವನ್ನು ಎದುರಿಸಲು ಬೇಕಾದ ಕಾನೂನುಗಳ ಅರಿವನ್ನೂ ಒದಗಿಸಿತ್ತು. ಹಾಗಾಗಿ ಚಿತ್ರದುರ್ಗದ ಅನೇಕ ವಕೀಲರು, ಹುಲ್ಲೂರು ಶ್ರೀನಿವಾಸ ಜೋಯಿಸರು, ಗುಂಡೂರಾಯರು, ರಾಜಶೇಖರಯ್ಯ ಹಿರೇಮಠ, ಹನುಮಂತರಾಯ, ಕೆ. ಕೆಂಚಪ್ಪ ಮುಂತಾದವರು ಹೋರಾಟದಲ್ಲಿ ಭಾಗಿಯಾಗಿದ್ದರು. ವಕೀಲರಲ್ಲಿ ಎಸ್. ನಿಜಲಿಂಗಪ್ಪ ದುರ್ಗದ ವಕೀಲರೆಂದು ಪ್ರಸಿದ್ಧರಾಗಿದ್ದರು. ಅವರ ವ್ಯವಹಾರ ವ್ಯಾಪ್ತಿ ಸ್ಥಳೀಯ ಕೋರ್ಟುಗಳಷ್ಟೇ ಅಲ್ಲದೆ ಬೆಂಗಳೂರಿನ ಹೈಕೋರ್ಟಿಗೂ ಪಸರಿಸಿತ್ತು. ತಮ್ಮಲ್ಲಿಗೆ ಬಂದ ವ್ಯವಹಾರದ ವಿವರಣೆಗಳನ್ನು ಶ್ರದ್ಧೆಯಿಂದ ಓದಿ ಮುಖ್ಯಾಂಶಗಳನ್ನು ಗ್ರಹಿಸಿ ನ್ಯಾಯಾಸ್ಥಾನದಲ್ಲಿ ಪರಿಣಾಮಕಾರಿಯಾಗಿ ವಾದಿಸುವ ಜಾಣ್ಮೆ ಅವರಲ್ಲಿತ್ತು. ಕಠಿಣ ವ್ಯವಹಾರಗಳನ್ನು ಚಾಣಾಕ್ಷತೆಯಿಂದ ಗೆಲ್ಲುತ್ತಿದ್ದರು. ನ್ಯಾಯನೀತಿಗಳಿಗೆ ಹೊರತಾದ ಮೊಕದ್ದಮೆಗಳನ್ನು ಅವರು ತಿರಸ್ಕರಿಸುತ್ತಿದ್ದರು.

೧೯೨೪ರಲ್ಲಿ ಅಖಿಲ ಭಾರತ ಕಾಂಗ್ರೆಸ್ ಮಹಾಸಭೆಯ ಅಧಿವೇಶನ ಬೆಳಗಾವಿಯಲ್ಲಿ ನಡೆದಾಗ ನಿಜಲಿಂಗಪ್ಪನವರು ಸ್ವಯಂಸೇವಕರಾಗಿ ಹೋಗಿದ್ದರು. ಅಲ್ಲಿ ಗಾಂಧೀಜಿಯವರ ಭಾಷಣ, ಭಾರತ ಸ್ವಾತಂತ್ರ್ಯಕ್ಕೆ ಅವರು ನಡೆಸುತ್ತಿದ್ದ ಅಹಿಂಸಾತ್ಮಕ ಹೋರಾಟಗಳಿಂದ ಪ್ರಭಾವಿತರಾಗಿ ನಿಜಲಿಂಗಪ್ಪನವರು ಚಿತ್ರದುರ್ಗಕ್ಕೆ ಹಿಂದಿರುಗಿದ ನಂತರ ತಾವೂ ಈ ಹೋರಾಟದಲ್ಲಿ ಭಾಗಿಯಾಗಬೇಕೆಂದು ದೃಢನಿಶ್ಚಯ ಮಾಡಿದರು. ವಕೀಲಿಕೆಯಿಂದ ಒಳ್ಳೆಯ ಸಂಪಾದನೆ ಇದ್ದರೂ, ಬಡತನದ ಬವಣೆಯಿಂದ ಮುಕ್ತಿ ಪಡೆಯುವ ಆಸೆ ಇದ್ದರೂ, ದೇಶದ ಗುಲಾಮಿತನದ ನಿವಾರಣೆಗೆ, ದೇಶಕ್ಕೆ ತಮ್ಮಿಂದ ಯಾವ



ಸೇವೆಯೂ ಸಂದಿಲ್ಲವೆಂಬ ಕೊರಗು ಅವರಲ್ಲಿತ್ತು. ಗಾಂಧೀಜಿಯವರ ಬರಹಗಳಿಂದ ಉತ್ಸಾಹಿತರಾಗಿದ್ದ ಅವರು ಕರ್ತವ್ಯ ಮತ್ತು ವೃತ್ತಿಯ ನಡುವಿನ ತಾಕಲಾಟದಲ್ಲಿದ್ದರೂ ಖಾದಿಧಾರಿಗಳಾಗಿದ್ದರು. ಈ ಸಂಗ್ರಾಮದಲ್ಲಿ ಭಾಗವಹಿಸಿಲ್ಲವೆಂಬ ಚಿಂತೆ ಅವರಲ್ಲಿ ತುಂಬಿತ್ತು. ಗಾಂಧೀಜಿಯವರ ದಂಡಿಯಾತ್ರೆ, ಅದರ ಫಲವಾಗಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸುವ ಹಂಬಲ, ಉಪ್ಪಿನ ಸತ್ಯಾಗ್ರಹ ವರದಿಗಳಿಂದ ಪ್ರೇರಿತರಾದ ನಿಜಲಿಂಗಪ್ಪನವರು ೧೯೩೧ರಿಂದಲೂ ಕಾಂಗ್ರೆಸ್ ಸಂಸ್ಥೆಯ ಸದಸ್ಯರೂ ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ಸದಸ್ಯರೂ ಆಗಿದ್ದರು. ಮುಂದೆ ನಿಜಲಿಂಗಪ್ಪನವರ ನೇತೃತ್ವದಲ್ಲಿ ಚಿತ್ರದುರ್ಗ ಕಾಂಗ್ರೆಸ್ ತನ್ನ ಸ್ವಾತಂತ್ರ್ಯ ಸಂಗ್ರಾಮದ ಯೋಜನೆ ರೂಪಿಸಿತು. ಈ ಸಮಯದಲ್ಲಿ ಉತ್ತರ ಕರ್ನಾಟಕ ಇತ್ಯಾದಿ ಪ್ರದೇಶದ ಕಾಂಗ್ರೆಸ್ ನಾಯಕರಾದ ನಾ. ಸು. ಹರ್ಡೀಕರ್, ಉಮಾಬಾಯಿ ಕುಂದಾಪುರ ಇವರು, ನಿಜಲಿಂಗಪ್ಪನವರು ಜಿಲ್ಲೆಯಲ್ಲಿ ಪ್ರವಾಸ ಮಾಡಿ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸಬೇಕೆಂದು ಜನತೆಗೆ ಕರೆ ಕೊಟ್ಟರು. ಸರ್ಕಾರವು ಅವರ ಭಾಷಣಗಳನ್ನು ಪ್ರತಿಬಂಧಿಸಿತು. ಎಸ್. ನಿಜಲಿಂಗಪ್ಪನವರು, ಗುಂಡೂರಾಯರು, ಹುಲ್ಲೂರು ಶ್ರೀನಿವಾಸ ಜೋಯಿಸರು, ಕೊಟ್ರೆನಂಜಪ್ಪನವರು ಸರ್ಕಾರದ ದಮನ ನೀತಿಯನ್ನು ಖಂಡಿಸಿದರು.

ಆಗ ಅಖಿಲ ಭಾರತ ಕಾಂಗ್ರೆಸ್ ಸಂಸ್ಥೆಯು ನೇರವಾಗಿ ಸಂಸ್ಥಾನಗಳ ರಾಜಕೀಯದಲ್ಲಿ ತಲೆ ಹಾಕಲು ನಿರಾಕರಿಸಿದ್ದರಿಂದ ಸಂಸ್ಥಾನಿಕರಿಗೆ ದಬ್ಬಾಳಿಕೆ ಸುಲಭವಾಗಿತ್ತು. ಬ್ರಿಟಿಷ್ ಪ್ರಾಂತ್ಯಗಳಲ್ಲಿದ್ದಂತೆ ಸ್ವತಂತ್ರ ನ್ಯಾಯಾಸ್ಥಾನಗಳಾಗಲೀ ರಾಜಕೀಯ ಕೈದಿಗಳ ಹಿತರಕ್ಷಣೆಯ ಕಾನೂನು ರಿಯಾಯಿತಿಗಳಾಗಲಿ ಸಂಸ್ಥಾನಗಳಲ್ಲಿ ಜಾರಿಯಲ್ಲಿರಲಿಲ್ಲ. ಆಗ ಮೈಸೂರು ಸಂಸ್ಥಾನದಲ್ಲಿ ಕಾಂಗ್ರೆಸ್ ಸಂಸ್ಥೆಯೊಂದೇ ಅಲ್ಲದೆ ಇತರ ರಾಜಕೀಯ ಪಕ್ಷಗಳೂ ಇದ್ದವು. ಜವಾಬ್ದಾರಿ ಸರ್ಕಾರ ತರುವುದು ಆ ಪಕ್ಷಗಳ ಗುರಿಯಾಗಿದ್ದರೂ ಸರ್ಕಾರ ಅನುಸರಿಸುತ್ತಿದ್ದ ವಿಭಜಿಸಿ ಆಳುವ ಚಾಣಾಕ್ಷ ನೀತಿಯಿಂದ ಏನನ್ನೂ ಸಾಧಿಸಲು ಶಕ್ತವಾಗಿರಲಿಲ್ಲ. ಅಖಿಲ ಭಾರತ ಕಾಂಗ್ರೆಸ್ ಸಂಸ್ಥೆ ಮೈಸೂರು ಕಾಂಗ್ರೆಸ್‌ಗೆ ಪೂರ್ಣರೀತಿಯ ನೆರವು ನೀಡುತ್ತಿರಲಿಲ್ಲ. ಹಾಗಾಗಿ ಮೈಸೂರು ಪ್ರದೇಶ ಕಾಂಗ್ರೆಸ್‌ನ ಅಸ್ತಿತ್ವ ಉಳಿಯಬೇಕಾದರೆ ವಿರೋಧ ಪಕ್ಷಗಳಾಗಿದ್ದ ಪ್ರಜಾಪಕ್ಷ ಮತ್ತು ಪ್ರಜಾಮಿತ್ರ ಮಂಡಳಿಗಳನ್ನು ಕಾಂಗ್ರೆಸ್‌ನಲ್ಲಿ ಸೇರಿಸಿ ಮೈಸೂರು ಸಂಸ್ಥಾನದ ಏಕೈಕ ಪ್ರಬಲ

ರಾಜಕೀಯ ಶಕ್ತಿಯನ್ನಾಗಿಸಿದರು. ಅಷ್ಟೇ ಅಲ್ಲ, ಎಸ್. ನಿಜಲಿಂಗಪ್ಪನವರು ಸರ್ಕಾರದ ದಮನ ನೀತಿಯನ್ನು ಖಂಡಿಸಿದರು. ಎಚ್. ಕೆ. ವೀರಣ್ಣಗೌಡ, ಸೂರ್ಯನಾರಾಯಣ ಪಂಡಿತರು ಚಿತ್ರದುರ್ಗ ಜಿಲ್ಲೆಯಲ್ಲಿ ಸಂಚರಿಸಿ ಸ್ವಾತಂತ್ರ್ಯ ಗಳಿಸಲು ಹೋರಾಡಬೇಕೆಂದು ಕರೆಯಿತ್ತರು. ವಾರ್ಧಾಕ್ಕೆ ಹೋಗಿ ಮಹಾತ್ಮಗಾಂಧಿಯವರ ಸಲಹೆ ಆಶೀರ್ವಾದಗಳನ್ನು ಪಡೆದು ಬಂದರು. ನಂತರ ೧೯೩೮ರಲ್ಲಿ ಪ್ರಜಾಪಕ್ಷ ಮತ್ತು ಪ್ರಜಾಮಿತ್ರ ಮಂಡಲಿ ಈ ಎರಡೂ ಸಂಸ್ಥೆಗಳು ವಿಲೀನಗೊಂಡು 'ಮೈಸೂರು ಕಾಂಗ್ರೆಸ್' ಅಸ್ತಿತ್ವಕ್ಕೆ ಬಂದಿತು. ವಿಲೀನೀಕರಣದ ಈ ನಿರ್ಧಾರಗಳನ್ನು ಯಶಸ್ವಿಯಾಗಿ ಆಚರಣೆಗೆ ತಂದು ಮೈಸೂರು ಕಾಂಗ್ರೆಸ್ಸನ್ನು ಮುನ್ನಡೆಸುವ ಕೆಲಸವನ್ನು ಎಸ್. ನಿಜಲಿಂಗಪ್ಪನವರು ಯಶಸ್ವಿಯಾಗಿ ಮಾಡಿದರು. ಇದರಲ್ಲಿ ಚಿತ್ರದುರ್ಗ ಜಿಲ್ಲೆಯ ಪಾತ್ರ ಪ್ರಮುಖವಾದುದು.

## ಜವಾಬ್ದಾರಿ ಸರ್ಕಾರಕ್ಕೆ ಹೋರಾಟ

೧೯೩೮ರಲ್ಲಿ 'ಮೈಸೂರು ಕಾಂಗ್ರೆಸ್' ಅಸ್ತಿತ್ವಕ್ಕೆ ಬಂದ ಮೇಲೆ ಕೆ. ಸಿ. ರೆಡ್ಡಿಯವರು ಅಧ್ಯಕ್ಷರೂ, ನಿಜಲಿಂಗಪ್ಪನವರು ಸ್ವಾಗತ ಸಮಿತಿಯ ಅಧ್ಯಕ್ಷರೂ ಆಗಿ ಮುಂದೆ ಸಂಸ್ಥಾನದಾದ್ಯಂತ ನಡೆದ ಜವಾಬ್ದಾರಿ ಸರ್ಕಾರ ರಚನೆಯ ಹೋರಾಟಕ್ಕೆ ಚಿತ್ರದುರ್ಗದ ವಿಲೀನೀಕರಣ ನಾಂದಿಯಾಯಿತು. ಇದು ಸಂಸ್ಥಾನದಲ್ಲಿ ಪೂರ್ಣ ಜವಾಬ್ದಾರಿ ಸರ್ಕಾರದ ಸ್ಥಾಪನೆಯೇ ತನ್ನ ಪರಮ ಧ್ಯೇಯವೆಂದು ಒಕ್ಕೊರಲಿನಿಂದ ಘೋಷಿಸಿತು. ಆಗ ಕಾಂಗ್ರೆಸ್ ಇತಿಹಾಸ ರಚಿಸಿದ ಡಾ. ಪಟ್ಟಾಭಿರಾಮಯ್ಯನವರು ಚಿತ್ರದುರ್ಗದಲ್ಲಿ ನಡೆದ ಈ ಚರಿತ್ರಾರ್ಹ ಸಂಬಂಧಕ್ಕೆ ಹೆಚ್ಚಿನ ಮಹತ್ತ್ವ ಕೊಟ್ಟರು. ಈ ಸಂದರ್ಭವು ರಾಜ್ಯದಲ್ಲಿ ರಾಜಕೀಯ ಪಕ್ಷಗಳ ಬೆಳವಣಿಗೆಯನ್ನು ಪೂರ್ಣಗೊಳಿಸಿ ಇತರ ಪಕ್ಷಗಳನ್ನು ಕಾಂಗ್ರೆಸ್‌ನಲ್ಲಿ ವಿಲೀನ ಮಾಡಿಕೊಂಡು ರಾಷ್ಟ್ರೀಯತೆಯನ್ನು ಸಾರಿತು. ನಂತರ ಮೈಸೂರು ಕಾಂಗ್ರೆಸ್ ಬೆಳೆಯುತ್ತಾ ಬಂದು ಅಖಿಲ ಭಾರತ ಕಾಂಗ್ರೆಸ್‌ನೊಡನೆ ವಿಲೀನವಾಗಿ ನಿಜಲಿಂಗಪ್ಪನವರ ರಾಜಕೀಯ ಜೀವನ ಸಿದ್ಧಿ ಸಾಧನೆಗಳಿಗೆ ಕಾರಣವಾಯಿತು. ಚಿತ್ರದುರ್ಗವು ಭಾರತ ನಕ್ಷೆಯಲ್ಲಿ ಗುರುತಿಸಲ್ಪಟ್ಟಿತು.

ನಂತರದಲ್ಲಿ ರಾಷ್ಟ್ರನೇತಾರರ ಭಾಷಣಗಳಿಂದ ಪ್ರಭಾವಿತರಾದ ಚಿತ್ರದುರ್ಗ, ಹೊಸದುರ್ಗ, ಹೊಳಲ್ಕೆರೆ, ಹಿರಿಯೂರು, ಚಳ್ಳಕೆರೆ, ದಾವಣಗೆರೆ, ಮೊಳಕಾಲ್ಮುರು ಮುಂತಾದ ಕಡೆಯ ಯುವಕರು, ಮಕ್ಕಳು, ಹಿರಿಯರಷ್ಟೇ ಅಲ್ಲ ಮಹಿಳೆಯರೂ ಹೋರಾಟದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಮುಂದೆಬಂದರು. ಬಳ್ಳಾರಿ ಸಿದ್ಧಮ್ಮ, ರಾಜಶೇಖರಯ್ಯ ಹಿರೇಮಠರ ಜೊತೆ ನಾಗರತ್ನಮ್ಮ ಹಿರೇಮಠ, ಸಾವಿತ್ರಿಬಾಯಿ, ವೆಂಕಮ್ಮ, ಗೌಡರ ಹನುಮಕ್ಕ, ಗಣೇಕಲ್ ಭೀಮಕ್ಕ, ಡಿ. ಗಂಗಮ್ಮ, ಜಯಲಕ್ಷ್ಮಿಬಾಯಿ ಕೇಶವರಾವ್ ಮುಂತಾದ ಮಹಿಳೆಯರು ಭಾಗವಹಿಸಿದರು. ೧೯೩೭ರ ಆಗಸ್ಟ್ ೧ರಂದು 'ತಿಲಕ ದಿನ' ಮತ್ತು 'ಮೂಲಭೂತ ಹಕ್ಕುಗಳ ದಿನ' ಆಚರಿಸಲಾಯಿತು. ಪ್ರತಿಬಂಧಕಾಜ್ಞೆಯ ದಿನಗಳಲ್ಲಿ ನಿಜಲಿಂಗಪ್ಪ ಧ್ವಜಾರೋಹಣ ಮಾಡಿ ಸಂಜೆ ಬಹಿರಂಗ ಸಭೆ ನಡೆಸಿ ಸರ್ಕಾರದ ದಮನ ನೀತಿಯನ್ನು ವಿರೋಧಿಸಿದರು.

೧೯೩೯ರ ಮೇ ತಿಂಗಳಿನಲ್ಲಿ ಚಿತ್ರದುರ್ಗದ ಅನೇಕ ಕಡೆ 'ಕಾಂಗ್ರೆಸ್ ಸಪ್ತಾಹ'ವನ್ನು ಆಚರಿಸಲಾಯಿತು. ಜಿಲ್ಲೆಯ ಮುಖಂಡರು ಜನತೆಗೆ ಸ್ವಾತಂತ್ರ್ಯ ಚಳುವಳಿಯ ಬಗ್ಗೆ ತಿಳುವಳಿಕೆ ನೀಡಿದರು. ಪ್ರತಿದಿನವೂ ಮೆರವಣಿಗೆ ಮತ್ತು ರಾಜಕೀಯ ಸಭೆಗಳನ್ನು ಏರ್ಪಡಿಸುತ್ತಿದ್ದರು. ಜಿಲ್ಲೆಯಾದ್ಯಂತ ಸೇಂದಿ ಅಂಗಡಿಗಳ ಪಿಕೆಟಿಂಗ್, ವಿದೇಶಿ ವಸ್ತುಗಳ ಬಹಿಷ್ಕಾರ ವ್ಯಾಪಕವಾಗಿ ನಡೆಯಿತು. ಅನೇಕರು ಖಾದಿ ವಸ್ತ್ರ ತೊಡಲಾರಂಭಿಸಿದರು. ಹರಿಹರದ ಗುಂಡೂರಾಯರು ಮೊದಲಾದವರು ವಿದೇಶಿ ವಸ್ತ್ರ ತ್ಯಜಿಸಿ ಖಾದಿ ಧರಿಸಲು ಜನತೆಗೆ ಪ್ರೇರೇಪಿಸಿದರು. ನಿಜಲಿಂಗಪ್ಪ, ಎನ್. ಎನ್. ಚಂದೂರು, ವಾಸುದೇವರಾವ್, ಎ. ಎಸ್. ಶ್ರೀನಿವಾಸಮೂರ್ತ್ಯಾಚಾರ್ ಮುಂತಾದವರು ಭಾಗವಹಿಸಿದರು.

## ತುರುವನೂರು ಅರಣ್ಯ ಸತ್ಯಾಗ್ರಹ

ಚಿತ್ರದುರ್ಗ ಜಿಲ್ಲೆಯ ಜನ ಇಂದಿಗೂ ತುರುವನೂರಿನ 'ಅರಣ್ಯ ಸತ್ಯಾಗ್ರಹ'ವನ್ನು ಒಂದು ಸ್ಮರಣೀಯ ಘಟನೆಯನ್ನಾಗಿ ಉದಾಹರಿಸುತ್ತಾರೆ. ೧೯೩೯ರಲ್ಲಿ ತುರುವನೂರಲ್ಲಿ ಜರುಗಿದ ಈ ಘಟನೆ ಆಗ ಭಾರತಾದ್ಯಂತ ಪ್ರಚಾರವಾಯಿತು. ಅದೊಂದು ರೋಮಾಂಚನಕಾರಿ ಘಟನೆ. ಈ ಹೋರಾಟದಲ್ಲಿ ಎಸ್. ನಿಜಲಿಂಗಪ್ಪನವರ ಪಾತ್ರ ವಿಶಿಷ್ಟವಾದುದು. ಹಲವಾರು ಸ್ವಾತಂತ್ರ್ಯ ಹೋರಾಟಗಾರರು, ಬಳ್ಳಾರಿ ಸಿದ್ಧಮ್ಮ, ಎನ್. ಎನ್. ಚಂದೂರು, ನಾಗರತ್ನಮ್ಮ ಹಿರೇಮಠ, ರಾಜಶೇಖರಯ್ಯ ಹಿರೇಮಠ ಮುಂತಾದವರನ್ನೊಳಗೊಂಡ ಗುಂಪು ಬಿಳಿಯ ಶುದ್ಧವಾದ ಖಾದಿಯನ್ನು ಧರಿಸಿ ಹೆಗಲುಗಳ ಮೇಲೆ ಕೊಡಲಿಗಳನ್ನು ಹೊತ್ತುಕೊಂಡು ತುರುವನೂರಿನ ಆರಣ್ಯದಲ್ಲಿರುವ ಈಚಲುಮರಗಳನ್ನು

ಕಡಿಯಲು ಹೊರಟರು. ಹೆಂಡದ ಉತ್ಪಾದನೆಗೆ ಕಾರಣವಾದ ಈಚಲುಮರಗಳನ್ನು ಕಡಿದರೆ ಹೆಂಡವೂ ಇಲ್ಲ, ಪಾನವೂ ಇಲ್ಲದಂತಾಗುತ್ತದೆ ಎಂಬ ಉದ್ದೇಶ ಚಳುವಳಿಯದಾಗಿತ್ತು. ಬಾಬು ರಾಜೇಂದ್ರ ಪ್ರಸಾದರು ಚಂಪಾರಣ್ಯದಲ್ಲಿ, ಸರ್ದಾರ್ ಪಟೇಲರು ಬಾರ್ಡೋಲಿಯಲ್ಲಿ ನಡೆಸಿದ ಸತ್ಯಾಗ್ರಹಗಳು ಚರಿತ್ರಾರ್ಹವಾದವು. ಅದೇ ರೀತಿಯ ಹೋರಾಟದ ದಾರಿಯನ್ನು ನಿಜಲಿಂಗಪ್ಪನವರು ಇಲ್ಲಿ ಅನುಸರಿಸಿದರು.

ಬಳ್ಳಾರಿ ಸಿದ್ದಮ್ಮನವರು ಹಾಗೂ ನಾಗರತ್ನಮ್ಮ ಹಿರೇಮಠ, ರಾಜಶೇಖರಯ್ಯ ಹಿರೇಮಠ ಅವರು 'ಪ್ರಥಮ ಡಿಕ್ಟರ್' ಆದ ಗೌರವವನ್ನು ಗಳಿಸಿಕೊಂಡರು. ನಾಗರತ್ನಮ್ಮ ಹಿರೇಮಠ ರಾಜಶೇಖರಯ್ಯ ಹಿರೇಮಠ ಅವರು ಮದುವೆಯಾಗಿ ಹಚ್ಚಿದ ಅರಿಷಿಣ ಆರುವ ಮೊದಲೇ, ಅಂದರೆ ಮದುವೆಯಾದ ಮರುದಿನವೇ ಅರಣ್ಯ ಸತ್ಯಾಗ್ರಹದಲ್ಲಿ ಭಾಗವಹಿಸಿದರು. ಒಳ್ಳೆಯ ವಾಗ್ಮಿಯಾದ ಇವರು ದೇಶಭಕ್ತಿಯನ್ನು ಪ್ರಚೋದಿಸುವ ಲೇಖನಗಳನ್ನು ಬರೆಯುತ್ತಿದ್ದರು. ಪತಿ ಪತ್ನಿ ಇಬ್ಬರೂ ವಿಚಾರ ಪ್ರಚೋದನೆಯ ಲೇಖನಗಳಿರುವ 'ಸತ್ಯವಾಣಿ' ಎಂಬ ಪತ್ರಿಕೆಯನ್ನು ಹೊರಡಿಸುತ್ತಿದ್ದರು. ಅರಣ್ಯ ಸತ್ಯಾಗ್ರಹದ ಆರಂಭದ ದಿನ ೧೫ ಜನರನ್ನು ಬಂಧಿಸಲಾಯಿತು. ಪ್ರತಿಬಂಧಕಾಜ್ಞೆ ಮುರಿದ ಕಾರಣಕ್ಕೆ ನಿಜಲಿಂಗಪ್ಪನವರು ಬಂಧಿತರಾಗಿ ಕೋರ್ಟಿನಿಂದ ಉಚ್ಚಾಟಿಸಲ್ಪಟ್ಟರು. ಜಿಲ್ಲೆಯ ಬೇರೆ ಬೇರೆ ಕಡೆ ನೂರಾರು ಜನರು ಬಂಧಿಸಲ್ಪಟ್ಟರು. ಶ್ರೇಷ್ಠ ವಾಗ್ಮಿಯಾಗಿದ್ದ ಬಳ್ಳಾರಿ ಸಿದ್ಧಮ್ಮನವರು ಸ್ವಾತಂತ್ರ್ಯ ಜಾಗೃತಿ ಭಾಷಣಗಳನ್ನು ಮಾಡಿ ಮರ ಕಡಿಯಲು ಉತ್ತೇಜಿಸುತ್ತಿದ್ದಾಗ ಪೊಲೀಸರು ತಡೆಯಲು ಬಂದು ಮೈಯಿಂದ ರಕ್ತ ಬರುವಂತೆ ಹೊಡೆದರೂ ಅವರು ಭಾಷಣವನ್ನು ನಿಲ್ಲಿಸಲಿಲ್ಲ. ಹೋರಾಟ ಮುಂದುವರಿಯಿತು. ಈ ಅರಣ್ಯ ಸತ್ಯಾಗ್ರಹದ ಸುದ್ದಿ ಜಿಲ್ಲೆಯ ತುಂಬೆಲ್ಲ ಹರಡಿ ಜನರು ಕೊಡಲಿ ಮತ್ತು ಮಚ್ಚುಗಳನ್ನು ಹೊತ್ತು ಮೆರವಣಿಗೆಯಲ್ಲಿ ಹೋಗಿ ಈಚಲು ಮರಗಳನ್ನು ಕಡಿಯಲಾರಂಭಿಸಿದರು. ಜಿಲ್ಲೆಯ ಇತರ ಕಡೆ ನೂರಾರು ಬಂಧನಗಳಾದವು. ನಾನಾ ಕಾರಣಗಳಿಂದ ಸಂಸ್ಥಾನದ ಹತ್ತು ಪ್ರಮುಖ ಲಾಯರ್‌ಗಳನ್ನು ಹೈಕೋರ್ಟಿನಿಂದ ಉಚ್ಚಾಟಿಸಲಾಯಿತು. ಅವರಲ್ಲಿ ಗೋವಿಂದರೆಡ್ಡಿ ಮುಲ್ಲಂಗಿಯವರೂ ನಿಜಲಿಂಗಪ್ಪನವರೂ ಸೇರಿದ್ದರು. ಅವರು ವಕೀಲಿ ಮಾಡದಂತೆ ಅವರ ಸನ್ನದನ್ನು ರದ್ದುಗೊಳಿಸಲಾಯಿತು.



ಸತ್ಯಾಗ್ರಹದಲ್ಲಿ ಭಾಗವಹಿಸಿದ ಅನೇಕರಿಗೆ ಪೊಲೀಸರು ಬಹಳ ಹಿಂಸೆ ಕೊಟ್ಟರು. ಅದರಲ್ಲಿ ಭಾಗವಹಿಸಿದ ಉಗ್ರಯ್ಯ ಎಂಬ ಹೋರಾಟಗಾರರು ತಮ್ಮ ಲೇಖನದಲ್ಲಿ ಒಂದೆಡೆ ಹೀಗೆ ಬರೆಯುತ್ತಾರೆ, "ನಾವು ಜೈಲಿನಲ್ಲಿದ್ದಾಗ ಪೊಲೀಸಿನವರು ನಮ್ಮ ಮನೆಗಳಿಗೆ ನುಗ್ಗಿ ಜಪ್ತಿ ಮಾಡಿ ಮನೆಯಲ್ಲಿದ್ದ ಹೆಂಗಸರು ಮಕ್ಕಳನ್ನು ಹೆದರಿಸಿ ಕೈಗೆ ಸಿಕ್ಕ ಬೆಲೆಬಾಳುವ ವಸ್ತುಗಳನ್ನೆಲ್ಲ ಕೊಂಡೊಯ್ದರಂತೆ. ನಮ್ಮನ್ನೆಲ್ಲ ಬೈರಮಂಗಲ ಪ್ರಾಜೆಕ್ಟ್‌ಗೆ ಕರೆದೊಯ್ದರು. ಕೆರೆ ಕಾಲುವೆ ತೆಗೆಯಲು ನಿಯಮಿಸಿದರು. ಉರಿವ ಬಿಸಿಲಲ್ಲಿ, ಸುಡುತ್ತಿರುವ ಧೂಳಿನಲ್ಲಿ, ಕಾಲಿಗೆ ಚಪ್ಪಲಿಗಳಿಲ್ಲದೆ, ಕುಡಿಯಲು ನೀರಿಲ್ಲದೆ, ಊಟವನ್ನು ಸರಿಯಾಗಿ ನೀಡದೆ, ನಾಯಿ ನರಿಗಳಿಗೂ ಕಡೆಯಾಗಿ ನಡೆಸಿಕೊಂಡರು" ಎಂಬ ಮಾತು ಆ ಜನ ಅಂದು ಸ್ವಾತಂತ್ರ್ಯಕ್ಕಾಗಿ ಎಂಥ ಚಿತ್ರಹಿಂಸೆ ಅನುಭವಿಸಿದರು ಎಂಬುದನ್ನು ಎತ್ತಿತೋರುತ್ತದೆ.

ಚಿತ್ರದುರ್ಗದ ಮಠದ ಕುರುಬರಹಟ್ಟಿಯ ಟಿ. ಮಾರಪ್ಪನವರು ಸ್ವಾತಂತ್ರ್ಯ ಹೋರಾಟಕ್ಕೆ ಸ್ವಯಂಪ್ರೇರಿತರಾಗಿ ಬಂದವರು. ಮಾದಿಗ ಜನಾಂಗದ ಇವರು ಹೆಚ್ಚು ಓದಿಲ್ಲದಿದ್ದರೂ ನಿಜಲಿಂಗಪ್ಪನವರು ಮತ್ತಿತರ ಹೋರಾಟಗಾರರಿಂದ ಪ್ರೇರಿತರಾಗಿ ೧೯೩೯ರ ಅರಣ್ಯ ಸತ್ಯಾಗ್ರಹದಲ್ಲಿ ನಿಜಲಿಂಗಪ್ಪ, ಚೆನ್ನಾರೆಡ್ಡಿ, ಗಾರೆಮನೆ ರಾಮರೆಡ್ಡಿ, ಬಳ್ಳಾರಿ ಸಿದ್ದಮ್ಮ ಮುಂತಾದವರೊಂದಿಗೆ ಭಾಗವಹಿಸಿದರು. ಅನಂತರ ಚಿತ್ರದುರ್ಗದಲ್ಲಿ ಹೆಂಡವನ್ನು ಹೊತ್ತು ತರುತ್ತಿದ್ದ ಲಾರಿಗಳನ್ನು ನಿಲ್ಲಿಸಿ ಅದರಲ್ಲಿದ್ದ ಹೆಂಡದ ಚೀಲಗಳನ್ನು ಕೊಯ್ದು ಹಾಕಿದವರಲ್ಲಿ ಇವರು ಪ್ರಮುಖರು. ಆಗ ಅಲ್ಲಿಗೆ ಬಂದ ಪೊಲೀಸರ ಕೈಗೆ ಸಿಗದೆ ಓಡಿಹೋಗಿದ್ದರು. ಹಾಗೆಯೆ 'ಕ್ವಿಟ್ ಇಂಡಿಯಾ ಚಳುವಳಿ'ಯಲ್ಲಿ ಅವರು ತಮ್ಮ ದುರ್ಗಪ್ಪನವರೊಂದಿಗೆ ದಾವಣಗೆರೆಗೆ ಹೋಗಿ ರೈಲ್ವೆಕಂಬಿ ಕಿತ್ತುಹಾಕುವ, ರೈಲ್ವೆಬೋಗಿಗಳನ್ನು ಧ್ವಂಸ ಮಾಡುವ ಕೆಲಸ ಮಾಡಿದಾಗ ಪೊಲೀಸರು ಮಾರಪ್ಪ ಮತ್ತು ಹರಿಹರದ ಎನ್. ಎಂ. ಚಂದ್ರಶೇಖರಯ್ಯ ಇವರನ್ನು ಬಂಧಿಸಿದ್ದರು. ಹಾಗೆಯೆ ಮಾರಪ್ಪನವರ ಜನಾಂಗದ ಪೆನ್ನಪ್ಪ ತಿಪ್ಪೇಸ್ವಾಮಿ ಇವರೂ ಚಳುವಳಿಯಲ್ಲಿ ಭಾಗವಹಿಸಿದ್ದರು.

೧೯೪೫ರಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸದಸ್ಯರನ್ನು ಸಂಘಟಿಸುವ ಹೊಣೆಯನ್ನು ಭೀಮಪ್ಪನಾಯಕರಿಗೆ ವಹಿಸಲಾಗಿತ್ತು. 'ಭಾರತ ಬಿಟ್ಟು ಹೊರಡಿ' ಚಳುವಳಿ ತೀವ್ರವಾದಾಗ ಕೋರ್ಟ್ ಎದುರು ಪಿಕೆಟಿಂಗ್ ಆರಂಭವಾಯಿತು. ವಕೀಲರುಗಳು

ಕೆಂಚಪ್ಪ ಮೊದಲಾದವರು ಕೋರ್ಟನ್ನು ಬಹಿಷ್ಕರಿಸಿದರು. ಸಾವಿರಾರು ಜನ ಸೇರಿದ್ದರು. ಗೋಲಿಬಾರ್ ಮಾಡುವ ಹಂತ ಸೃಷ್ಟಿಯಾದಾಗ ಭೀಮಪ್ಪನಾಯಕರು ಮಧ್ಯೆ ಪ್ರವೇಶಿಸಿ ಜಾಣತನದಿಂದ ಪರಿಸ್ಥಿತಿಯನ್ನು ನಿಭಾಯಿಸಿದರು. ಹೊಳಲ್ಕೆರೆಯ ಕೊಟ್ರೆನಂಜಪ್ಪನವರನ್ನು ಬಂಧಿಸಿ, ಚಿತ್ರಹಿಂಸೆ ಕೊಟ್ಟಾಗ ಸ್ವಾತಂತ್ರ್ಯ ಹೋರಾಟಗಾರರು ಅದನ್ನು ಖಂಡಿಸಿದರು.

ಹೊಳಲ್ಕೆರೆ ತಾಲ್ಲೂಕು ರಂಗಾಪುರದ ಎಸ್. ಆರ್. ಸಿದ್ಧಪ್ಪ ಮತ್ತು ಕೊಟ್ರೆನಂಜಪ್ಪ ಇಬ್ಬರೂ ಸೇರಿ ೧೯೩೮ರಲ್ಲಿ ರಂಗಾಪುರದಲ್ಲಿ ರೈತರ ಬೃಹತ್ ಸಮಾವೇಶವನ್ನು ಏರ್ಪಡಿಸಿದ್ದರು. ಸುಮಾರು ೧೦೦೦೦ಕ್ಕೂ ಹೆಚ್ಚು ರೈತರು ಸೇರಿದ್ದರು. ಈ ಸಮಾವೇಶವನ್ನು ಉದ್ದೇಶಿಸಿ ಎಸ್. ನಿಜಲಿಂಗಪ್ಪನವರು, ಎ. ಭೀಮಪ್ಪ ನಾಯಕರು ಉತ್ತರ ಕರ್ನಾಟಕದ ಹಳ್ಳಿಕೇರಿ ಗುದ್ಲೆಪ್ಪನವರು, ಸಿದ್ಧಲಿಂಗಯ್ಯನವರು ಮತ್ತು ತಾಳ್ಳಕೆರೆ ಸುಬ್ರಮಣ್ಯಂ ಮುಂತಾದ ನಾಯಕರು ಸ್ಫೂರ್ತಿಯುತ ಭಾಷಣ ಮಾಡಿ "ಸ್ವಾತಂತ್ರ್ಯ ಚಳುವಳಿಯಲ್ಲಿ ರೈತರು, ಮಹಿಳೆಯರು ಸಕ್ರಿಯವಾಗಿ ಭಾಗವಹಿಸಬೇಕು. ನಾಡಿನ ಎಲ್ಲ ವರ್ಗದ ಜನ ಹೋರಾಟ ಮಾಡಿ ಸ್ವಾತಂತ್ರ್ಯ ಪಡೆಯೋಣ. ನಮ್ಮ ಭವಿಷ್ಯವನ್ನು ನಾವೇ ರೂಪಿಸಿಕೊಳ್ಳೋಣ" ಎಂದು ಕರೆ ನೀಡಿದರು.

ಪೊಲೀಸರ ಹಿಂಸೆ ಅಲ್ಲದೆ ಕಾನೂನು ಭಂಗ ಮಾಡಿ ಮರಗಳನ್ನು ಕಡಿದ ನಷ್ಟಕ್ಕಾಗಿ ಕಾನೂನು ಪರಿಪಾಲನೆಗೆ ಮಾಡಿದ ಹೆಚ್ಚಿನ ವೆಚ್ಚವನ್ನು ತುಂಬಲು ಆಯಾ ಊರ ಜನರಿಂದಲೇ ಪುಂಡುಗಂದಾಯ ವಸೂಲಿ ಮಾಡಬೇಕೆಂದು ಜನರ ಮೇಲೆ ಪುಂಡುಗಂದಾಯ ವಿಧಿಸಲಾಯಿತು. ಜನರ ಆಸ್ತಿಪಾಸ್ತಿ ಜಪ್ತಿ ಮಾಡುವುದು, ಹರಾಜು ಹಾಕುವುದು ನಡೆದವು. ಆದರೂ ಜನರೇನೂ ಹೆದರಲಿಲ್ಲ. ಈ ಸತ್ಯಾಗ್ರಹ ವಿಶೇಷವಾಗಿ ಕೊಳಹಾಳು, ಹೊಳಲ್ಕೆರೆ, ರಂಗಾಪುರ, ಹೊಸದುರ್ಗ, ಬಾಗೂರು, ಕಸ್ತೂರಿರಂಗಪ್ಪನಹಳ್ಳಿ, ದೊಗ್ಗನಾಳು, ನುಲೇನೂರು, ಗೋರ್ಲತ್ತು, ಮರಡಿಹಳ್ಳಿ, ಚಳ್ಳಕೆರೆ ಮುಂತಾದ ಸ್ಥಳಗಳಲ್ಲಿ ಅಂಥ ಕೆಲಸಗಳೆಲ್ಲ ಹೆಚ್ಚು ನಡೆದು ಅವೂ ಚಳುವಳಿಯ ಕೇಂದ್ರಗಳಾದವು. ೧೦೦೦ಕ್ಕೂ ಹೆಚ್ಚು ಜನ ಸತ್ಯಾಗ್ರಹಿಗಳು ಬಂಧಿತರಾಗಿ ಅವರನ್ನು ಬಂಧಿಸಿಡಲು ಸೆರೆಮನೆಗಳು ಸಾಲದೆ ಮನಬಂದಂತೆ ಹೊಡೆದು ವ್ಯಾನುಗಳಲ್ಲಿ ತುಂಬಿಕೊಂಡು ನೂರಾರು ಮೈಲು ದೂರದ ಕಾಡುಗಳಿಗೆ ಬಿಟ್ಟು ಬಂದರು. ಆಗ ನಡೆದ ಮಹಿಳೆಯೊಬ್ಬಳ ಸ್ಥಿತಿ ಮನ ಮಿಡಿಯುವಂತಹುದು, ಕಣ್ಣೀರು ತರುವಂಥದ್ದು.



ಈಚಲುಮರ ಕಡಿದ ಕಾಂಗ್ರೆಸ್ ಸಿದ್ದಪ್ಪನವರ ಧರ್ಮಪತ್ನಿ ಶಾಂತಮ್ಮ ತುಂಬು ಗರ್ಭಿಣಿಯಾಗಿದ್ದರೂ ಈಚಲುಮರ ಕಡಿಯುವ ಚಳುವಳಿಯಲ್ಲಿ ಭಾಗವಹಿಸಿದ್ದರು. ಆಕೆಗೆ ಹೊಡೆದು ಬಂಧಿಸಿದ ಪೊಲೀಸರು ಆಕೆ ತುಂಬು ಗರ್ಭಿಣಿಯಾಗಿರುವುದು ತಿಳಿದು ಮಧ್ಯರಾತ್ರಿ ರೈಲಿನಲ್ಲಿ ಕರೆದುಕೊಂಡು ಹೋಗಿ ರಂಗಾಪುರದಲ್ಲಿ ಏಕಾಂಗಿಯಾಗಿ ಬಿಟ್ಟು ಬಂದರು. ಆ ದಿನ ಬೆಳಗಿನ ಜಾವ ಆ ತಾಯಿ ಮರದ ಕೆಳಗೆ ಮಗುವನ್ನು ಹೆತ್ತರು. ಗಂಡ ಜೈಲಿನಲ್ಲಿದ್ದು ಮನೆ ಮಠ ಕಳೆದುಕೊಂಡಿದ್ದ ಆಕೆಗೆ ಆ ಊರಿನ ಜನರೇ ಆಶ್ರಯ ಕೊಟ್ಟರು. ಗಂಡ ಬರುವ ತನಕ ಆಕೆಯನ್ನು ಕಾಪಾಡಿದರು. ಎಂತಹ ಸ್ಥಿತಿಯಲ್ಲೂ ಹೋರಾಟ ಬಿಡದಿದ್ದುದು ಅಂದಿನ ಜನರ ದೃಢಸಂಕಲ್ಪ ತ್ಯಾಗ ಮನೋಭಾವವನ್ನು ತೋರಿಸುತ್ತದೆ.

ಮೊದಲ ತಂಡ ಬಂಧಿಸಲ್ಪಟ್ಟಾಗ ಮತ್ತೊಂದು ತಂಡ ಸತ್ಯಾಗ್ರಹ ಆರಂಭಿಸಿತು. ಸ್ವಯಂಸೇವಕರು ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿದರು. ಸೀತಾರಾಮರೆಡ್ಡಿ ನಾಯಕತ್ವ ವಹಿಸಿದರು. ಆ ಸಂದರ್ಭದಲ್ಲಿ ಚಿತ್ರದುರ್ಗದ ಬುರುಜಿನಹಟ್ಟಿಯ ಶಾನುಭೋಗ ನಾರಾಯಣಪ್ಪ ಸತ್ಯಾಗ್ರಹಿಗಳಿಗೆ ಸಹಾಯ ಮಾಡಿದ ಆರೋಪದ ಮೇಲೆ ಬಂಧಿಸಲ್ಪಟ್ಟರು. ಅರಣ್ಯ ಸತ್ಯಾಗ್ರಹವು ಬಿರುಸಿನಿಂದ ನಡೆದು ೪೪೫ ಈಚಲುಮರಗಳನ್ನು ಕಡಿಯಲಾಯಿತು. ಸರ್ಕಾರವು ಭಾಷಣ ಮತ್ತು ಮೆರವಣಿಗೆಗಳನ್ನು ನಿಷೇಧಿಸಿ ಪ್ರತಿಬಂಧಕಾಜ್ಞೆ ಹೊರಡಿಸಿತು. ಸತ್ಯಾಗ್ರಹಿಗಳು ಬೇರೆ ಬೇರೆ ಊರುಗಳ ಜೈಲುಗಳಲ್ಲಿ ತುಂಬಲ್ಪಟ್ಟರು. ಸಿದ್ಧಲಿಂಗಪ್ಪ ಮತ್ತು ನಿಜಲಿಂಗಪ್ಪನವರಿಗೆ ೧೮ ತಿಂಗಳ ಕಾರಾಗೃಹ ಶಿಕ್ಷೆ ವಿಧಿಸಲ್ಪಟ್ಟಿತು. ಮುಂಬಯಿಯ ಮಾಜಿ ಪಾರ್ಲಿಮೆಂಟರಿ ಕಾರ್ಯದರ್ಶಿ ಟಿ. ಆರ್. ನೆಸ್ವಿಯವರು ಚಿತ್ರದುರ್ಗ ಜಿಲ್ಲೆಯಲ್ಲಿ ಭಾಷಣ ಮಾಡದಂತೆ ಪ್ರತಿಬಂಧಕಾಜ್ಞೆ ವಿಧಿಸಲಾಯಿತು.

ಮೈಸೂರು ಸರ್ಕಾರದ ಈ ಉಗ್ರ ಕ್ರಮವನ್ನು ಅಖಿಲ ಭಾರತ ಕಾಂಗ್ರೆಸ್ ನಾಯಕರು ಒಕ್ಕೊರಲಿನಿಂದ ಖಂಡಿಸಿದರು. ಮೈಸೂರು ಕಾಂಗ್ರೆಸ್‌ನ ಈ ಅಹಿಂಸಾತ್ಮಕ ಹೋರಾಟದ ಬಗೆಗೆ ಮಹಾತ್ಮ ಗಾಂಧಿಯವರು ಪ್ರಶಂಸೆ ವ್ಯಕ್ತಪಡಿಸಿ ಸರ್ಕಾರ ಜನರಿಗೆ ಕೊಟ್ಟ ಚಿತ್ರಹಿಂಸೆಯ ವಿಷಯ, ಸಂಸ್ಥಾನದ ರಾಜಕೀಯ ಪರಿಸ್ಥಿತಿಯನ್ನು ತಿಳಿಯಲು ತಮ್ಮ ಆಪ್ತ ಕಾರ್ಯದರ್ಶಿ ಮಹದೇವ ದೇಸಾಯಿಯವರನ್ನು ಕಳುಹಿಸಿದರು. ಅವರ ವರದಿಯಿಂದ ಇಲ್ಲಿ ನಡೆದ

ಘಟನೆಗಳೆಲ್ಲ ಸತ್ಯ ಎಂದು ಸಾಬೀತಾಯಿತು. ತುರುವನೂರಿನ ಜನ ಮಹಾರಾಜರಿಗೆ ಒಂದು ಸಾಮೂಹಿಕ ಮನವಿಯನ್ನು ಸಲ್ಲಿಸಬೇಕೆಂದು ನಿರ್ಧರಿಸಿ ಕಾಂಗ್ರೆಸ್ ನಾಯಕ ಗೋವಿಂದರೆಡ್ಡಿಯವರನ್ನು ಮನವಿ ಸಲ್ಲಿಸಲು ಕಳುಹಿಸಿದರು. ಅವರು ದಿ. ೨೩–೧೨–೧೯೪೦ರಲ್ಲಿ ಮಹಾರಾಜರ ಭೇಟಿಯ ಸಮಯದಲ್ಲಿ ಒಂದು ಮನವಿ ಸಲ್ಲಿಸಿ ಸರ್ಕಾರವು ತುರುವನೂರಿನ ಜನತೆಯ ಮೇಲೆ ವಿಧಿಸಿದ್ದ ಪುಂಡುಗಂದಾಯವನ್ನು ರದ್ದುಮಾಡುವಂತೆ ಕೇಳಿಕೊಂಡರು. ಗೋವಿಂದರೆಡ್ಡಿಯವರು ಕೆ. ಟಿ. ಭಾಷ್ಯಂ ಅವರಿಗೆ ಪತ್ರ ಬರೆದು ಸರ್ಕಾರದವರು ಬಲಾತ್ಕಾರವಾಗಿ ಕಂದಾಯ ವಸೂಲು ಮಾಡುತ್ತಿದ್ದಾರೆ; ಕೊಡದಿದ್ದಾಗ ಅವರ ಮನೆಯ ಸಾಮಾನುಗಳನ್ನು ಜಪ್ತಿ ಮಾಡುತ್ತಿದ್ದಾರೆ. ಈ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ಭಾಷ್ಯಂ ಅವರನ್ನು ಕೇಳಿಕೊಂಡರು.

ಮುಂದೆ ೧೯೪೧ರಲ್ಲಿ ಹರಿಹರದ ಬಳಿ ಮೂರನೆಯ ಕಾಂಗ್ರೆಸ್ ಅಧಿವೇಶನ ಜರುಗಿತು. ಡಾ. ಬಾಬು ರಾಜೇಂದ್ರ ಪ್ರಸಾದ್ ಅವರು ಅಧ್ಯಕ್ಷತೆ ವಹಿಸಿದ್ದು, ಅವರ ಅಧ್ಯಕ್ಷ ಭಾಷಣ ಜಿಲ್ಲೆಯ ಜನರಿಗೆ ವಿಶೇಷ ಸ್ಫೂರ್ತಿ ನೀಡಿತು.

### ಕ್ವಿಟ್ ಇಂಡಿಯಾ ಚಳುವಳಿ (ವಿದೇಶಿಯರೆ ಭಾರತ ಬಿಟ್ಟು ತೊಲಗಿ)

ಮೈಸೂರು ಕಾಂಗ್ರೆಸ್‌ನ ಹಿರಿಯ ನಾಯಕರು ಜೈಲಿಗೆ ಹೋದ ಇಂಥ ಪರಿಸ್ಥಿತಿಯಲ್ಲಿ ಮೈಸೂರಿನಮಹಾ ರಾಜರಾದ ಶ್ರೀ ಜಯಚಾಮರಾಜ ಒಡೆಯರ ಸಿಂಹಾಸನಾರೋಹಣವು ದಿ. ೦೮–೦೯–೧೯೪೦ರಲ್ಲಿ ನಡೆಯಿತು. ಈ ಸಂದರ್ಭದಲ್ಲಿ ನಿಜಲಿಂಗಪ್ಪನವರು, ಇತರ ವಕೀಲರು, ರಾಜಕೀಯ ಬಂಧಿಗಳನ್ನು ಬಿಡುಗಡೆಗೊಳಿಸಲಾಯಿತು. ಇದು ಸ್ವಾತಂತ್ರ್ಯ ಹೋರಾಟವನ್ನು ಮತ್ತಷ್ಟು ಬಿರುಸುಗೊಳಿಸಲು ಕಾರಣವಾಯಿತು.

ಈ ಮಧ್ಯೆ ದ್ವಿತೀಯ ಮಹಾಯುದ್ಧದ ಕಾವು ಭಾರತವನ್ನು ತಟ್ಟಿತ್ತು. ಒಂದು ಕಡೆ ಜಪಾನಿನ ಭಯ, ಇನ್ನೊಂದು ಕಡೆ ಜರ್ಮನಿಗೆ ಯುದ್ಧದಲ್ಲಿ ಗೆಲುವು ಈ ಎರಡೂ ಆಘಾತಗಳಿಂದ ಬ್ರಿಟಿಷ್ ಸರ್ಕಾರಕ್ಕೆ ಭಯವುಂಟಾಯಿತು. ಇದೇ ಸಂದರ್ಭದಲ್ಲಿ ಅಖಿಲ ಭಾರತ ಕಾಂಗ್ರೆಸ್ ಭಾರತಕ್ಕೆ ಸ್ವಾತಂತ್ರ್ಯ ಕೊಟ್ಟರೆ ಬ್ರಿಟಿಷರಿಗೆ ಸಹಾಯ ಮಾಡುವುದಾಗಿ ಹೇಳಿತು. ಆಯಾ ಪ್ರಾಂತ್ಯಗಳ ಕಾಂಗ್ರೆಸ್ ಸರ್ಕಾರಗಳು ರಾಜಿನಾಮೆ ಕೊಟ್ಟಿದ್ದವು.



ಇಂತಹ ಸಂದಿಗ್ಧ ವಾತಾವರಣದಲ್ಲಿ ಮೈಸೂರು ಕಾಂಗ್ರೆಸ್ ಐದನೆಯ ಮಹಾಧಿವೇಶನ ೧೯೪೨ರ ಏಪ್ರಿಲ್‌ನಲ್ಲಿ ಶ್ರೀ ಪಿ. ಸುಬ್ರಹ್ಮಣ್ಯಂ ಅವರ ಅಧ್ಯಕ್ಷತೆಯಲ್ಲಿ ನಡೆದು, ಅಖಿಲ ಭಾರತ ಕಾಂಗ್ರೆಸ್ ನಿಲವನ್ನು ಸಮರ್ಥಿಸಿ ಅದರಂತೆ ನಡೆಯಲು ನಿರ್ಧರಿಸಿತು. ಅಖಿಲ ಭಾರತ ಕಾಂಗ್ರೆಸ್‌ನ ಕಾರ್ಯಕಾರಿ ಸಮಿತಿಯು ೧೯೪೨ನೇ ಇಸವಿಯ ಆಗಸ್ಟ್ ತಿಂಗಳಿನಲ್ಲಿ ಬೊಂಬಾಯಿ ನಗರದಲ್ಲಿ ಸಭೆ ಸೇರಿತು. ಸ್ವತಃ ಗಾಂಧೀಜಿಯವರೇ ಉಪಸ್ಥಿತರಿದ್ದ ಈ ಸಭೆಯಲ್ಲಿ ಬ್ರಿಟಿಷ್ ಸಾಮ್ರಾಜ್ಯಶಾಹಿಗೆ ಕೊನೆಯ ಎಚ್ಚರಿಕೆ ನೀಡಿ ಬ್ರಿಟಿಷರನ್ನು ಭಾರತದಿಂದ ಹೊರದೂಡುವ 'ಕ್ವಿಟ್ ಇಂಡಿಯಾ' ನಿರ್ಣಯ ಅಂಗೀಕರಿಸಲ್ಪಟ್ಟಿತು. ಈ ಐತಿಹಾಸಿಕ ಸಭೆಗೆ ಮೈಸೂರು ಕಾಂಗ್ರೆಸ್ಸಿನ ಪ್ರತಿನಿಧಿಗಳಾಗಿ ತೆರಳಿದ್ದ ನಾಯಕರಲ್ಲಿ ನಿಜಲಿಂಗಪ್ಪನವರು ಒಬ್ಬರು. ನಿರ್ಣಯವನ್ನು ಕಾರ್ಯಗತ ಮಾಡಲು ಮೈಸೂರಿಗೆ ಹಿಂತಿರುಗುತ್ತಿದ್ದಾಗ ರಾಜ್ಯದ ಗಡಿಯಲ್ಲಿ ಅವರನ್ನು ಬಂಧಿಸಿ ವಿಚಾರಣೆ ಮಾಡದೆ ಸ್ಥಾನಬದ್ಧತೆಯಲ್ಲಿ ಇಡಲಾಯಿತು. ಎರಡು ವರ್ಷ ಅವರನ್ನು ಸೆರೆಯಲ್ಲಿಟ್ಟು ೧೯೪೪ರಲ್ಲಿ ಬಿಡುಗಡೆ ಮಾಡಲಾಯಿತು.

'ಕ್ವಿಟ್ ಇಂಡಿಯಾ' ಚಳುವಳಿ ಜಿಲ್ಲೆಯ ರಾಜಕೀಯ ಹೋರಾಟಕ್ಕೆ ಹೊಸ ಸ್ವರೂಪವನ್ನು ಕೊಟ್ಟಿತು. ಚಿತ್ರದುರ್ಗದ ಜನರು ಭಾವುಕತೆಯಿಂದ ಭಾಗವಹಿಸಿದರು. ದಾವಣಗೆರೆಯ ಕಾರ್ಮಿಕರು ಚಳುವಳಿಯಲ್ಲಿ ಉತ್ಸಾಹದಿಂದ ಭಾಗವಹಿಸಿದರು. ವಿದ್ಯಾರ್ಥಿಗಳು, ಸ್ತ್ರೀಯರು, ಯುವಕರು, ವಕೀಲರು, ಕೂಲಿಕಾರ್ಮಿಕರು ಉತ್ಸಾಹದಿಂದ ಚಳುವಳಿಯಲ್ಲಿ ಪಾಲ್ಗೊಂಡರು. ವಿದ್ಯಾರ್ಥಿಗಳು ಶಾಲಾ ಕಾಲೇಜುಗಳನ್ನು ಬಿಟ್ಟು ಹೊರಬಂದರು. ಅವರನ್ನು ಬಂಧಿಸಲಾಯಿತು. ವಿದ್ಯಾರ್ಥಿ ವೇತನಗಳನ್ನು ರದ್ದು ಮಾಡಲಾಯಿತು. ಸರ್ಕಾರವು ಚಳುವಳಿಯನ್ನು ಹತ್ತಿಕ್ಕಲು ಸೈನ್ಯವನ್ನು ಬಳಸಿತು. ಚಳುವಳಿಕಾರರು ದಾವಣಗೆರೆಯ ರೈಲುನಿಲ್ದಾಣಕ್ಕೆ ಬೆಂಕಿಯಿಟ್ಟರು. ಅಂಚೆ ಕಛೇರಿಗಳನ್ನು ಲೂಟಿ ಮಾಡಿ ಟೆಲಿಗ್ರಾಫ್ ತಂತಿಗಳನ್ನು ನಾಶಪಡಿಸಿದರು.

ಚಳುವಳಿಗಾರರ ವಿಧ್ವಂಸಕ ಕೃತ್ಯಕ್ಕೆ ಹೆದರಿ ಸರ್ಕಾರವು ರಾತ್ರಿ ಓಡಾಡುವ ರೈಲುಗಳನ್ನು ಕೆಲವು ತಿಂಗಳ ಕಾಲ ನಿಲ್ಲಿಸಿತು. ಚಳುವಳಿಕಾರರಿಂದ ಸರ್ಕಾರದ ಉಗ್ರಾಣಗಳಿಗೆ ಮುತ್ತಿಗೆ ಹಾಕಲಾಯಿತು. ಅಲ್ಲಲ್ಲಿ ಮೆರವಣಿಗೆಗಳು ನಡೆದವು.

ಚಿತ್ರದುರ್ಗದ ಲಾವಣಿ ಬಸವರಾಜಪ್ಪನವರು ಮತ್ತು ಮಂಜುನಾಥರಾವ್ ಅವರು ಲಾವಣಿಗಳನ್ನು ಕಟ್ಟಿ ಹಾಡುತ್ತ ಜಿಲ್ಲೆಯ ಜನರನ್ನು ಹುರಿದುಂಬಿಸಿದರು. ಹುಲ್ಲೂರು ಶ್ರೀನಿವಾಸ ಜೋಯಿಸರು 'ಪ್ರಳಯ' ಎಂಬ ಭೂಗತ ಪತ್ರಿಕೆ ಹೊರಡಿಸುತ್ತಿದ್ದು, ಎಚ್. ನಾರಾಯಣರಾವ್, ಎಸ್. ವಾಸುದೇವರಾವ್, ಪಿ. ಚೆನ್ನಾರೆಡ್ಡಿ, ಕೆ. ಸಂಜೀವರೆಡ್ಡಿ ಮುಂತಾದವರು ಉತ್ತೇಜಕ ಲೇಖನಗಳನ್ನು ಬರೆಯುತ್ತಿದ್ದರು. ಜಿ. ನಾರಾಯಣರಾವ್, ನರಸಿಂಹರೆಡ್ಡಿ, ಹನುಮಂತಪ್ಪ, ಎಂ. ಗೋವಿಂದರೆಡ್ಡಿ, ಮುಂತಾದವರು ಗುಪ್ತವಾಗಿ ಅದನ್ನು ಪ್ರಸಾರಿಸುತ್ತಿದ್ದರು. ಇವರೆಲ್ಲರಿಗೆ ಗುಂಡೂರಾಯರು, ಹುಲ್ಲೂರು ಶ್ರೀನಿವಾಸ ಜೋಯಿಸರು, ಕೊಟ್ರೆನಂಜಪ್ಪ, ಖಾದಿ ಸಿದ್ಧಲಿಂಗಪ್ಪ, ಉಗ್ರಪ್ಪ, ಸಿದ್ಧಪ್ಪ, ಕೆಂಚಪ್ಪ, ಎಂ. ಲಿಂಗಪ್ಪ, ಹೊಸದುರ್ಗದ ಡಿ.ಸಿ. ಕೃಷ್ಣಪ್ಪ, ಬಿ.ಎನ್. ನರಸಿಂಹರೆಡ್ಡಿ, ಹಿರಿಯೂರಿನ ಉಗ್ರಯ್ಯ, ಜಿ. ವಿ. ಅಂಜನಪ್ಪ, ಗಾಂಜಿ ವೀರಪ್ಪ, ಚಳ್ಳಕೆರೆ ಸಿ. ವಿ. ಕೃಷ್ಣಮೂರ್ತಿ, ಎಸ್. ವೀರಬಸಪ್ಪ, ನಾರಾಯಣ ಅಯ್ಯಂಗಾರ್, ಹೊ. ಚಿ. ಬೋರಯ್ಯ, ಹುಲ್ಲೂರು ಪಾಂಡುರಂಗ ಜೋಯಿಸ್ ಮುಂತಾದವರು ಚಳುವಳಿಯಲ್ಲಿ ಸಕ್ರಿಯರಾಗಿದ್ದರು. ಇದೇ ಸಮಯದಲ್ಲಿ ಚಿತ್ರದುರ್ಗದ ವೆಂಕಟೇಶ್ವರ ಬಡಾವಣೆಯ ಶಾಲೆ ಸುಡಲಾಯಿತು. ಹಿರಿಯೂರು ತಾಲ್ಲೂಕು ಮದ್ದೂರಹಳ್ಳಿ ಸೇತುವೆಗೆ ಡೈನಮೈಟ್ ಇಡಲು ಹೋದ ಗೋವಿಂದಸ್ವಾಮಿ, ಎನ್. ಉಗ್ರಯ್ಯ ಮತ್ತು ರಂಗಯ್ಯನವರು ಸಿಕ್ಕಿಬಿದ್ದು ಶಿಕ್ಷೆಗೆ ಒಳಗಾದರು.

ಅನ್ನದಾನಿ ಆರ್. ವೀರಭದ್ರಪ್ಪನವರು ಮೊಳಕಾಲ್ಮುರಿನ ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಅವರ ಜೊತೆಯಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ ಯರ್ರಂ ನರಸಿಂಹಯ್ಯ, ಎನ್. ಸಿ. ಅಯ್ಯಣ್ಣ, ಕೆರೆಕೊಂಡಾಪುರದ ಎಸ್. ಹೆಚ್. ಬಸಣ್ಣ, ಡಾ. ಡಿ. ಎಸ್. ಚಂದ್ರಶೇಖರ್ ಮತ್ತು ಡಾ. ರಾಮಕೃಷ್ಣಯ್ಯ, ಜಿ. ಈಶ್ವರಪ್ಪ, ಕೆಂಚಲಿಂಗಪ್ಪ, ಹೆಚ್. ಡಿ. ಶರಣಪ್ಪ, ಕೆ. ಬಹದ್ದೂರ್‌ಖಾನ್, ಪಾಲಮ್ಮ, ವೃಷಭೇಂದ್ರಮ್ಮ, ಹೆಚ್. ಗಂಗಣ್ಣ, ವಿ. ಎನ್. ಜಯಣ್ಣ, ಕೆ. ಸತ್ಯಪ್ಪ ಮುಂತಾದವರು ಅರಣ್ಯ ಸತ್ಯಾಗ್ರಹ, ಕ್ವಿಟ್ ಇಂಡಿಯಾ, ಮೈಸೂರು ಚಲೋ ಚಳುವಳಿಯಲ್ಲಿ ಭಾಗವಹಿಸಿ ಜೈಲಿಗೆ ಹೋಗಿಬಂದರು.

ಅನ್ನದಾನಿ ವೀರಭದ್ರಪ್ಪನವರು ವಿಶೇಷವಾಗಿ ನಿಜಲಿಂಗಪ್ಪನವರಿಗೆ ಪ್ರೀತಿಪಾತ್ರರಾಗಿದ್ದವರು. ೧೯೪೨ರಲ್ಲಿ ಕ್ವಿಟ್ ಇಂಡಿಯಾ ಚಳವಳಿ, ೧೯೪೭ರ ಮೈಸೂರು ಚಲೋ ಚಳುವಳಿಯಲ್ಲಿ ಭಾಗವಹಿಸಿದ್ದರು. ಇವರ ಪೂರ್ವಜರು ಚಳ್ಳಕೆರೆ ತಾಲೂಕಿನ ತಳುಕಿನಲ್ಲಿ ಇದ್ದವರು. ತಳುಕಿಗೆ ಬಂದು ಹೋಗುತ್ತಿದ್ದ ಸೈನಿಕರಿಗೆ ಉಚಿತವಾಗಿ ಅನ್ನದಾನ ಮಾಡುತ್ತಿದ್ದರೆಂದೂ ಹಾಗೆಯೇ ಬರಗಾಲದಲ್ಲಿ ಗಂಜಿಯನ್ನು ನೀಡುತ್ತಿದ್ದರೆಂದೂ ಹಾಗಾಗಿ 'ಅನ್ನದಾನಿ' ಎನ್ನುವ ವಿಶೇಷಣ ಇವರ ಮನೆತನಕ್ಕೆ ಬಂದಿದೆಯೆಂದೂ ಹೇಳುತ್ತಾರೆ. ಚಿತ್ರದುರ್ಗದ ಸ್ವಾತಂತ್ರ್ಯ ಹೋರಾಟಗಾರರು ಸೇರುವ ಕೇಂದ್ರಸ್ಥಳವಾಗಿದ್ದ ನೀಲಕಂಠೇಶ್ವರ ದೇವಾಲಯದಲ್ಲಿ ನಡೆದ ಬಹಿರಂಗ ಸಭೆಯಲ್ಲಿ ೧೯೪೨ರ ಆಗಸ್ಟ್ ೨೬ರಂದು ೧೬ ವರ್ಷದ ಬಾಲಕ ವೀರಭದ್ರಪ್ಪ ಕ್ರಾಂತಿಕಾರಿಯಾಗಿ ಧ್ವಜ ಹಾರಿಸಲು ಭಾರತೀಯರಿಗೆ ಅವಕಾಶ ಮಾಡಿಕೊಡಬೇಕೆಂದು ಸ್ಫೂರ್ತಿಯುತ ಭಾಷಣ ಮಾಡಿದರು. ದುರ್ಗದ ಜನತೆ ಅವರ ವಾಕ್‌ಚಾತುರ್ಯ ಕಂಡು ಆಶ್ಚರ್ಯಪಟ್ಟರು. ಆಗ ಪೊಲೀಸರು ವಾರೆಂಟ್‌ನೊಂದಿಗೆ ಈ ಹುಡುಗನನ್ನು ಬಂಧಿಸಲು ಹುಡುಕಲಾರಂಭಿಸಿದರು. ಆಗ ವೀರಭದ್ರಪ್ಪನವರು ಮನೆಯವರಿಗೆ ಪತ್ರವೊಂದನ್ನು ಬರೆದು ಜೈಲಿನಲ್ಲಿದ್ದರೆ ಹೋರಾಟ ಸಾಧ್ಯವಿಲ್ಲ. ಹೊರಗಡೆ ಇದ್ದರೆ ಹೋರಾಡುವುದು ಸಾಧ್ಯವಾಗುತ್ತದೆಯೆಂದು ರಾತ್ರಿಯಾದ ಮೇಲೆ ಯಾರನ್ನು ಬಂಧಿಸಲು ಸಾಧ್ಯವಿಲ್ಲ ಎಂದು ಹಗಲೆಲ್ಲ ಬೆಟ್ಟದ ದೇವಾಲಯಗಳಲ್ಲಿದ್ದು ಓದುತ್ತ ಇರುವುದು, ದೇಶದ ಸ್ವಾತಂತ್ರ್ಯ ಹೋರಾಟದ ಬಗ್ಗೆ ಚಿಂತಿಸುವುದು, ರಾತ್ರಿಯಾದ ನಂತರ ಹಾಸ್ಟೆಲ್‌ಗೆ ವಾಪಾಸು ಬರುವುದು, ಹೀಗೆ ಮಾಡಿದರು. ಇದರಿಂದ ಈ ವಿದ್ಯಾರ್ಥಿ ಕೆಲವು ಉಪಾಧ್ಯಾಯರಿಗೆ ದೇಶಭಕ್ತನಾಗಿ ಕಂಡುಬಂದರೆ, ಇನ್ನು ಕೆಲವರಿಗೆ ಈ ವಿದ್ಯಾರ್ಥಿ ಸೈದ್ಧಾಂತಿಕ ಭಿನ್ನಾಭಿಪ್ರಾಯ ಹೊಂದಿದ್ದರಿಂದ ದಾರಿ ತಪ್ಪಿದವನೆಂದು ಅನ್ನಿಸಿತ್ತು. ಬಾಲಕ ವೀರಭದ್ರಪ್ಪ ಅವರು ತಮ್ಮ ಕುಟುಂಬದ ಹಿರಿಯ ಆಪ್ತರೊಬ್ಬರಿಗೆ ಬರೆದ ಪತ್ರವೊಂದು ಅತ್ಯಂತ ಮನೋಜ್ಞವಾಗಿದ್ದು, ಆ ಕಾಲದ ದೇಶಭಕ್ತ ವಿದ್ಯಾರ್ಥಿಗಳು ಓದನ್ನು ಬಿಟ್ಟು ಹೋರಾಟಕ್ಕೆ ಧುಮುಕಿದಾಗಿನ ಕಠೋರ ಸ್ಥಿತಿಯನ್ನೂ, ತಂದೆ ತಾಯಿಗಳಿಂದ ಗುರುಗಳಿಂದ ಬೈಸಿಕೊಂಡ ಬಗೆಯನ್ನೂ ತಿಳಿಸುತ್ತದೆ (ಪತ್ರಕ್ಕೆ ಅನುಬಂಧ ನೋಡಿ. ಈ ಪತ್ರವನ್ನು ಅವರ ಮಗ ಮಹಾರಾಜ ಕಾಲೇಜಿನ ಪ್ರಾಚಾರ್ಯ ಪ್ರೊ. ಎ. ವಿ. ನುಂಕಪ್ಪನವರು ಕೊಟ್ಟಿದ್ದಾರೆ). ಅನಂತರ ಅವರು ಶಾಲೆಯನ್ನು ಬಿಟ್ಟು ಪೂರ್ಣಾವಧಿ ಸ್ವಾತಂತ್ರ ಹೋರಾಟದಲ್ಲಿ ಭಾಗವಹಿಸಿದರು. ಕನ್ನಡದ ಖ್ಯಾತ ಕಾದಂಬರಿಕಾರಾಗಿ ಹೆಸರಾದ ತರಾಸು ಅವರು

ಚಿತ್ರದುರ್ಗದವರೇ ಆದರೂ ತುಮಕೂರಿನಲ್ಲಿ ಇಂಟರ್‌ಮೀಡಿಯೇಟ್ ಓದುತ್ತಿದ್ದಾಗ, 'ಚಲೇ ಜಾವ್' ಚಳುವಳಿಯಲ್ಲಿ ಧುಮುಕಿ ಜೈಲುವಾಸವನ್ನು ಅನುಭವಿಸಿದರು. ಎಸ್. ನಿಜಲಿಂಗಪ್ಪ, ಹುಲ್ಲೂರು ಶ್ರೀನಿವಾಸ ಜೋಯಿಸ್, ಸಿದ್ದವನಹಳ್ಳಿ ಕೃಷ್ಣಶರ್ಮ ಇಂಥವರ ಚಿಂತನೆಗಳು ಅವರ ಮೇಲೆ ಬೀರಿದ್ದ ಪ್ರಭಾವ ಅದಕ್ಕೆ ಕಾರಣ.

ಕೂನಬೇವು ಗ್ರಾಮದ ಅಲ್ಲಾಡಿ ಸಿದ್ದಪ್ಪನವರು ಕಡುಬಡತನದಲ್ಲಿದ್ದರೂ ತಮ್ಮ ಜೀವನಕ್ಕಾಗಿ ಸಬ್‌ರಿಜಿಸ್ಟ್ರಾರ್ ಆಫೀಸ್ ಬಳಿ ಪತ್ರ ಬರಹಗಾರರಾಗಿ ಕೆಲಸಮಾಡುತ್ತ ಒಳ್ಳೆಯ ಬರಹಗಾರರೆಂದು ಹೆಸರು ಸಂಪಾದಿಸಿದ್ದರು. ತುರುವನೂರಿನ ಅರಣ್ಯ ಸತ್ಯಾಗ್ರಹದಲ್ಲಿ ನಿಜಲಿಂಗಪ್ಪನವರ ಜೊತೆಯಲ್ಲಿ ಭಾಗವಹಿಸಿದ್ದ ಅವರು, ನಿಜಲಿಂಗಪ್ಪನವರ ಜೊತೆಯಲ್ಲಿ ಜೈಲಿಗೂ ಹೋಗಿದ್ದರು. ಅವರು ಬಾಲಕನಾಗಿದ್ದಾಗಲೇ ಕೂನಬೇವಿನ ಬಾಲಕಮಿತ್ರ ಎನ್. ಭೀಮಪ್ಪನವರ ಜೊತೆಗೆ ಚಳುವಳಿಗೆ ಹೋಗಿದ್ದರಂತೆ. ಚಿಕ್ಕಗೊಂಡನಹಳ್ಳಿಯ ದೊಡ್ಡಶೀಲಂ ತಿಪ್ಪೇರುದ್ರಪ್ಪನವರೂ ಅಲ್ಲಾಡಿ ಸಿದ್ಧಪ್ಪನವರ ಜೊತೆಗೆ ಅರಣ್ಯ ಸತ್ಯಾಗ್ರಹದಲ್ಲಿ ಭಾಗವಹಿಸಿ ಜೈಲುಶಿಕ್ಷೆ ಅನುಭವಿಸಿದ್ದರು. ಮುಂದೆ ಕೆಲಕಾಲ ಗ್ರಾಮ ಪಂಚಾಯ್ತಿ ಅಧ್ಯಕ್ಷರಾಗಿದ್ದ ಅವರು ಸ್ವಾತಂತ್ರ್ಯ ಹೋರಾಟಗಾರರಾಗಿದ್ದರೂ ಪಿಂಚಣಿ ಪಡೆಯಲು ನಿರಾಕರಿಸಿದ್ದರು. "ಪಿಂಚಣಿ ಪಡೆಯಲು ನಾವು ಜೈಲಿಗೆ ಹೋಗಲಿಲ್ಲ; ಸ್ವಾತಂತ್ರ್ಯ ಪಡೆಯಲು ತಾವು ಜೈಲಿಗೆ ಹೋಗಿದ್ದೆವು" ಎಂದು ಹೇಳುತ್ತಿದ್ದರಾದರೂ ಕಡೆಗೆ ತಮ್ಮ ಪತ್ನಿ ರುದ್ರಮ್ಮನ ಆಸೆಯಂತೆ ಕೊನೆಗಾಲದಲ್ಲಿ ಪಿಂಚಣಿ ಪಡೆಯಬೇಕಾಯಿತು.

ಮಾಯಕೊಂಡ, ಹೊಳಲ್ಕೆರೆ, ಪಂಡರಹಳ್ಳಿ, ಗುಡ್ಡದ ರಂಗವ್ವನಹಳ್ಳಿ, ಕಡಬನಕಟ್ಟೆ, ಕಲ್ಲೇದೇವರಪುರ ಮುಂತಾದ ಕಡೆ ಸರ್ಕಾರದ ಆಸ್ತಿಪಾಸ್ತಿಗಳನ್ನು ನಾಶ ಮಾಡುವ ಕೃತ್ಯ ತೀವ್ರವಾಯಿತು. ದಾವಣಗೆರೆಯಲ್ಲಿ ಚಳುವಳಿ ಉಗ್ರ ರೂಪ ಪಡೆದು ಸುತ್ತಮುತ್ತಲ ಹಳ್ಳಿಗಳಿಗೂ ವ್ಯಾಪಿಸಿತು. ಹುಲ್ಲೂರು ಶ್ರೀನಿವಾಸ ಜೋಯಿಸರು ನೀಲಕಂಠೇಶ್ವರಸ್ವಾಮಿ ದೇವಸ್ಥಾನದ ಬಳಿ ಇದ್ದ ಕಾಂಗ್ರೆಸ್ ಕಚೇರಿಯ ಮೇಲೆ ಸರ್ಕಾರದ ನಿಷೇಧಾಜ್ಞೆಯನ್ನು ಉಲ್ಲಂಘಿಸಿ ಧ್ವಜ ಹಾರಿಸಿ ಧ್ವಜಸತ್ಯಾಗ್ರಹ ನಡೆಸಿದರು. ಆಗ ಅವರ ಬಂಧನವಾಗಿ ಒಂದೂವರೆ ವರ್ಷ ಬಂಧನದಲ್ಲಿರಬೇಕಾಗಿ ಬಂದಿತು.



ದಾವಣಗೆರೆಯಲ್ಲಿ ಈ ಚಳುವಳಿ ಉಗ್ರರೂಪ ಪಡೆದು ಸುತ್ತಮುತ್ತಲ ಹಳ್ಳಿಗಳಿಗೂ ವ್ಯಾಪಿಸಿತು. ರೈಲುನಿಲ್ದಾಣ ಮತ್ತು ರೈಲ್ವೆ ಬೋಗಿಗಳನ್ನು ಡಬ್ಬಗಟ್ಟಲೆ ಸೀಮೆಎಣ್ಣೆ ಸುರಿದು ಸುಟ್ಟುಹಾಕಿದರು. ಇದರಿಂದ ಹೆದರಿದ ಸರ್ಕಾರ ಕೆಲವು ತಿಂಗಳ ಕಾಲ ರಾತ್ರಿ ಓಡಾಡುವ ರೈಲುಗಳನ್ನು ನಿಲ್ಲಿಸಿತು. ತಾಲ್ಲೂಕು ಕಛೇರಿ, ಖಜಾನೆ, ಪೊಲೀಸ್ ಸ್ಟೇಷನ್‌ಗಳನ್ನು ಮುತ್ತಲು ಸಹಸ್ರಾರು ಜನರು ಧಾವಿಸಿದರು. ಸತ್ಯಾಗ್ರಹಿಗಳನ್ನು ಹತೋಟಿಯಲ್ಲಿ ಇಡಲಾಗದೆ ಸರಕಾರ ಮಿಲಿಟರಿಯನ್ನು ಕರೆಸಿಕೊಂಡಿತು. ಆಗ ನಡೆದ ಒಂದು ಘಟನೆ ಅತ್ಯಂತ ರೋಮಾಂಚಕಾರಿ ಯಾದದ್ದು. ೫೦೦ ಜನ ಸ್ವಯಂಸೇವಕರೊಂದಿಗೆ ಬಂದ ನಾಗಪ್ಪ ಹಳ್ಳೂರು ಎಂಬ ಯುವಕ ದಾವಣಗೆರೆಗೆ ಹೋಗುವ ಸೈನ್ಯದ ತುಕಡಿಯನ್ನು ಅಡ್ಡಗಟ್ಟಿದನು. ಆಗ ಸೇನಾಧಿಕಾರಿಗಳು ಗುಂಡು ಹಾರಿಸುವುದಾಗಿ ಎಚ್ಚರಿಕೆ ನೀಡಿದರು. ಅದಕ್ಕೆ ನಾಗಪ್ಪ ಎಳ್ಳಷ್ಟೂ ಹೆದರದೆ ತಮ್ಮ ಮೃತದೇಹದ ಮೇಲೆ ಸೈನಿಕರು ಹಾದು ಹೋಗಬಹುದೆಂದು ತಿಳಿಸಿ ರಸ್ತೆಯ ಮಧ್ಯದಲ್ಲಿ ಸೈನಿಕರಿಗೆ ಎದುರಾಗಿ ನಿಂತನು. ಆಗ ಸೈನಿಕರು ಗುಂಡು ಹಾರಿಸಿಯೇ ಬಿಟ್ಟರು. ಆಗ ನಾಗಪ್ಪ ರಸ್ತೆಯ ಮಧ್ಯದಲ್ಲಿ ಧೀರೋದಾತ್ತವಾಗಿ ಹುತಾತ್ಮನಾದನು. ಇದು ಅಂದಿನ ದೇಶಪ್ರೇಮಿಗಳು ತಮ್ಮ ಪ್ರಾಣದ ಬಗ್ಗೆ ಕಿಂಚಿತ್ತೂ ಲೆಕ್ಕಿಸದೆ ದೇಶಕ್ಕಾಗಿ ತಮ್ಮ ಪ್ರಾಣವನ್ನು ಹೇಗೆ ಅರ್ಪಿಸುತ್ತಿದ್ದರೆಂಬುದಕ್ಕೆ ರೋಮಾಂಚಕಾರಿಯಾದ ಒಂದು ಉದಾಹರಣೆಯಾಗಿದೆ.

ನಾಗಪ್ಪ ಗೋಲಿಬಾರ್ ಆಗಿ ಹುತಾತ್ಮನಾದ ಮೇಲೆ ದಾವಣಗೆರೆ ರಕ್ತದ ಮಡುವಾಯಿತು. ಇನ್ನೂ ನಾಲ್ಕು ಜನರು ಅಂದರೆ ಬಂದೂರು ಕ್ಯಾಂಪಿನ ನಿಂಗಪ್ಪ, ಹಮಾಲ ತಮ್ಮಣ್ಣ, ಮಾಗಾನಹಳ್ಳಿ ಹನುಮಂತಪ್ಪ, ಅಕ್ಕಸಾಲಿಗರ ವಿರೂಪಾಕ್ಷ ಇವರೂ ಹುತಾತ್ಮರಾದರು. ಉಗ್ರವಾದಿಗಳಾಗಿದ್ದ ಇಟಗಿ ವೇದಮೂರ್ತಿ, ಸಮಾಜವಾದಿ ಶಿವಾನಂದಯ್ಯ, ಬಳ್ಳಾರಿ ಮುರಿಗೆಪ್ಪ, ವೆಂಕಟಶೆಟ್ಟಿ, ಗುರುಬಸಪ್ಪ, ರಾಜಪ್ಪ, ಕೊಟಿಗಿ ಸಿದ್ದಿಂಗಪ್ಪ, ಲೋಕಪ್ಪ, ಯಲ್ಲಪ್ಪ, ಎಸ್. ನಿಜಲಿಂಗಪ್ಪ, ಕೆ. ಎಚ್. ರಂಗನಾಥ್, ಕೆ. ಬಿ. ಓಬಯ್ಯ, ಸಿದ್ಧಣ್ಣ, ಜಯರಾಮರೆಡ್ಡಿ ಮುಂತಾಗಿ ಹಲವರು ಬಂಧಿತರಾದರು. ಕೆಲವರು ಭೂಗತರಾಗಿ ತಪ್ಪಿಸಿಕೊಂಡರು. ಕೊಟ್ರೆನಂಜಪ್ಪ, ಕಾಸಲ ಶ್ರೀನಿವಾಸ ಶೆಟ್ಟರು ಬಹಳ ಸ್ಫೂರ್ತಿದಾಯಕವಾಗಿ ಹೋರಾಡಿದರು. ಈ ರೀತಿಯಾದ ದೇಶದ ಸಮಷ್ಟಿ ಶಕ್ತಿ ಹೋರಾಟದ ಫಲವಾಗಿ ೧೯೪೭ರಲ್ಲಿ ರಾಷ್ಟ್ರಕ್ಕೆ ಸ್ವಾತಂತ್ರ್ಯ ಬಂದಿತು.

## ಮೈಸೂರು ಚಲೋ ಚಳುವಳಿ; ಪೈಲ್ವಾನ್ ನಂಜಪ್ಪನ ಸಾಹಸ

ದೇಶಕ್ಕೆ ಸ್ವಾತಂತ್ರ್ಯ ಬಂದಿತಾದರೂ ದುರ್ಗದಲ್ಲಿ ಹೋರಾಟ ನಿಲ್ಲಲಿಲ್ಲ. ಇನ್ನೊಂದು ಬಗೆಯ ಹೋರಾಟ ಆರಂಭವಾಯಿತು. ಮೈಸೂರನ್ನು ಭಾರತ ಒಕ್ಕೂಟಕ್ಕೆ ಸೇರಿಸುವ ಆ ಚಳುವಳಿ ಮತ್ತೊಂದು ರೀತಿಯದು. 'ಮೈಸೂರು ಚಲೋ' ಎಂಬ ಹೆಸರಿನಿಂದ ಪ್ರಖ್ಯಾತವಾದ ಈ ಚಳುವಳಿಯೂ ತೀವ್ರಸ್ವರೂಪ ಪಡೆದುಕೊಂಡಿತ್ತು. ಈ ಚಳುವಳಿಯ ನೇತಾರರಾಗಿ ಕೆ. ಸಿ. ರೆಡ್ಡಿ, ಟಿ. ಸುಬ್ರಮಣ್ಯ, ರಾಜಶೇಖರಯ್ಯ ಹಿರೇಮಠ ಇವರು ಜಿಲ್ಲೆಯಾದ್ಯಂತ ಸಂಚರಿಸಿ ಜನರನ್ನು ಹೋರಾಟಕ್ಕೆ ಸಿದ್ಧಗೊಳಿಸಿದರು. ಸರ್ಕಾರಿ ಕಛೇರಿಗಳ ಮೇಲೆ ರಾಷ್ಟ್ರಧ್ವಜ ಹಾರಿಸುವುದು, ಶಾಲೆಗಳಿಗೆ ಬಹಿಷ್ಕಾರ ಹಾಕುವುದು, ಕೆಲಸಕ್ಕೆ ಹಾಜರಾಗದಿರುವುದು, ಹೆಂಡ ತೆಗೆಯುವ ಮರಗಳನ್ನು ಕತ್ತರಿಸುವುದು– ಈ ಮುಂತಾದವುಗಳ ಮೂಲಕ ಆಳರಸರ ಆಳ್ವಿಕೆಯನ್ನು ಪ್ರತಿಭಟಿಸಿದರು. ಸರ್ಕಾರಿ ಕಚೇರಿಗಳ ಮೇಲೆ ಧ್ವಜ ಹಾರಿಸುವ ಕಾರ್ಯದಿಂದ ಸಿಟ್ಟಿಗೆದ್ದ ರಾಜ್ಯ ಸರ್ಕಾರ ಲಾಠಿಛಾರ್ಜ್ ಮತ್ತು ಗೋಲಿಬಾರ್ ಮಾಡಿತು. ಇದರಿಂದ ದಾವಣಗೆರೆಯಲ್ಲಿ ಬೆಣ್ಣೆ ಕರಿಬಸಪ್ಪ, ಚಳ್ಳಕೆರೆಯಲ್ಲಿ ಅರ್ಧಂ ಸುಬ್ಬರಾಯಶೆಟ್ಟಿ, ಹೊಸದುರ್ಗದಲ್ಲಿ ಕೊಂಡಾಪುರದ ದೊಡ್ಡಹನುಮಯ್ಯ, ಹಿರೇತಿಮ್ಮಯ್ಯ, ಗುತ್ತಿಕಟ್ಟೆ ಗ್ರಾಮದ ಸಣ್ಣಮ್ಮ, ಹೊನ್ನೇನಹಳ್ಳಿ ಶಂಕ್ರಪ್ಪ, ರಾಮಜ್ಜನಹಳ್ಳಿ ರಂಗಪ್ಪ, ಒಂಟಿನಗೆರೆ ಗವಿಕಾಡಪ್ಪ, ಮಲ್ಲಿಗೆಹಳ್ಳಿ ನಿಂಗಪ್ಪ, ಈ ಏಳು ಜನರು ಪೊಲೀಸರ ಗುಂಡಿಗೆ ಬಲಿಯಾದರು. ಅದೇ ರೀತಿ ರಾಮಗಿರಿ ನುಲೇನೂರಿನ ಸಿದ್ದಬಸಪ್ಪ ಎಂಬ ೧೯ ವರ್ಷದ ತರುಣ (ಇವರು ನನ್ನ ಮಾವನವರ ಅಣ್ಣ) ಇವರು ಕೂಡಾ ಮೈಸೂರು ಚಲೋ ಚಳುವಳಿಯಲ್ಲಿ ಮೈಸೂರಿನಲ್ಲಿ ಸೈನಿಕರ ಗುಂಡಿಗೆ ಆಹುತಿಯಾಗಿ ಹುತಾತ್ಮರಾದರು.

ಸರ್ಕಾರದ ಈ ವರ್ತನೆಯಿಂದ ಸಿಟ್ಟಿಗೆದ್ದ ಜಿಲ್ಲೆಯ ಜನ ಮತ್ತೂ ತೀವ್ರವಾಗಿ ಪ್ರತಿಭಟಿಸಲು ನಿರ್ಧರಿಸಿದರು. ಜಿಲ್ಲೆಯ ಸರ್ಕಾರಿ ಕಚೇರಿಗಳ ಮೇಲೆ ಧ್ವಜ ಹಾರಿಸಲು ಯೋಚಿಸಿ ಐದೈದು ಜನರ ತಂಡಗಳಲ್ಲಿ ತಾಲ್ಲೂಕು ಕಛೇರಿಯ ಮೇಲೆ ಧ್ವಜ ಹಾರಿಸಬೇಕೆಂದು ಸಾವಿರಾರು ಜನ ಮೆರವಣಿಗೆಯಲ್ಲಿ ಹೊರಟರು. ತಾಲ್ಲೂಕು ಕಛೇರಿಯ ಸುತ್ತ ಸರ್ಪಗಾವಲಾಗಿ ಅನೇಕ ಪೊಲೀಸರಿದ್ದರು. ಚಳುವಳಿಕಾರರ ಒಂದು ಗುಂಪಿಗೆ ನೇತಾರನಾಗಿದ್ದ ಚಿತ್ರದುರ್ಗದ ಪ್ರಖ್ಯಾತ ಪೈಲ್ವಾನ್ ನಂಜಪ್ಪ ಪೊಲೀಸರ ಎದುರೇ ಧ್ವಜ ಹಾರಿಸಿಬಿಟ್ಟರು. ಅದೊಂದು ರೋಮಾಂಚನಕಾರಿ ಘಟನೆಯೇ ಸರಿ. ಇದು ನಡೆಯುತ್ತಿದ್ದಂತೆ ಗೋಲಿಬಾರ್ ಆಯಿತು. ಹಲವರಿಗೆ ಗುಂಡಿನೇಟು ಬಿದ್ದು ಆಸ್ಪತ್ರೆಗೆ ಸೇರಿಸಲ್ಪಟ್ಟರು. ಹಾಗೆ ಗುಂಡು ತಗುಲಿದವರಲ್ಲಿ ಮಿಠಾಯಿ ಜಯಣ್ಣ, ಚಮ್ಮಾರ ಹನುಮಂತಪ್ಪ, ಬೆಳಗಟ್ಟದ ರೆಡ್ಡಿ, ಇವರ ಕಾಲು ಕೈಯಿ ತೊಡೆಗಳಲ್ಲಿ ಗುಂಡು ಹೊಕ್ಕವು. ನಂಜಪ್ಪನವರು ಮತ್ತು ಅಲ್ಲಾಡಿ ಸಿದ್ದಪ್ಪನವರು ಸ್ವಲ್ಪದರಲ್ಲಿ ಗುಂಡೇಟಿನಿಂದ ಪಾರಾಗಿದ್ದರು. ಕೆ. ಟಿ. ಜಂಬಣ್ಣ, ಎಚ್. ಕೆಂಪಹೊನ್ನಪ್ಪ, ಬಿ. ತಿಪ್ಪಣ್ಣ, ಬಿ. ಮುರುಗಯ್ಯ, ಮಲ್ಲಿಕಾರ್ಜುನಪ್ಪ, ಭೀಮಪ್ಪನಾಯಕ, ಹುಲ್ಲೂರು ಶ್ರೀನಿವಾಸ ಜೋಯಿಸ್, ಗಾಂಜಿ ವೀರಪ್ಪ, ಕೆ. ಕೆಂಚಯ್ಯ, ಲಾಡರ ಗಂಗಾಧರಪ್ಪ, ಹೊ. ಚಿ. ಬೋರಯ್ಯ ಮುಂತಾಗಿ ಅನೇಕರು ಬಂಧಿಸಲ್ಪಟ್ಟರು. ರಾಜ್ಯಾದ್ಯಂತ ಚಳುವಳಿ ಹೆಚ್ಚಾದಾಗ ರಾಜರ ಸರ್ಕಾರ ಅನಿವಾರ್ಯವಾಗಿ ಭಾರತ ಒಕ್ಕೂಟ ಸೇರಿತು. ಅಖಿಲ ಮೈಸೂರು ಕಾಂಗ್ರೆಸ್ ಸಮಿತಿಯ ಅಧಿವೇಶನ ಚಿತ್ರದುರ್ಗದಲ್ಲಿ ನಡೆದು, ಮೈಸೂರು ಮುಖ್ಯಮಂತ್ರಿಗಳಾಗಿ ಕೆ. ಚಂಗಲರಾಯರೆಡ್ಡಿ, ಎಂಪಿಸಿಸಿ ಅಧ್ಯಕ್ಷರಾಗಿ ಎಸ್. ನಿಜಲಿಂಗಪ್ಪನವರು ಚುನಾಯಿತರಾದರು. ಜನ ವಿಜಯೋತ್ಸವ ಆಚರಿಸಿದರು. ಜನರ ಹೋರಾಟ ತ್ಯಾಗ ಬಲಿದಾನಗಳು ಫಲಿಸಿದವು. ಮುಂದೆ ಎಸ್. ನಿಜಲಿಂಗಪ್ಪನವರು ಸ್ವತಂತ್ರ ಭಾರತದ ಕರ್ನಾಟಕದ ರೂವಾರಿಯೆನಿಸಿದರು; ಎರಡು ಬಾರಿ ಮುಖ್ಯಮಂತ್ರಿಯಾದರು.

ಅಲ್ಲಾಡಿ ಸಿದ್ದಪ್ಪನವರು 'ಮೈಸೂರು ಚಲೋ' ಚಳುವಳಿಯ ಸಂದರ್ಭದಲ್ಲಿ ಪೈಲ್ವಾನ್ ನಂಜಪ್ಪ, ಜಿ. ಎಸ್. ತಿಪ್ಪೇರುದ್ರಪ್ಪ, ಮುಂತಾದವರ ಜೊತೆಗೆ ಭಾಗವಹಿಸಿದಾಗ ಪೊಲೀಸರು "ಗುಂಡು ಹಾರಿಸುತ್ತೇವೆ, ಧ್ವಜ ಹಾರಿಸಬೇಡಿ" ಎಂದಾಗ, "ಗುಂಡು ಹಾರಿಸು, ನೋಡುತ್ತೇನೆ" ಎಂದೂ "ಸ್ವಾತಂತ್ರ್ಯ ಚಿರಾಯುವಾಗಲಿ" ಎಂದೂ ಅಲ್ಲಾಡಿ ಸಿದ್ದಪ್ಪನವರು ಕೂಗಿದರಂತೆ. ಪೊಲೀಸರು ಗುಂಡು ಹಾರಿಸಿದಾಗ, ಜಿ. ಎಸ್. ತಿಪ್ಪೇರುದ್ರಪ್ಪನವರು ಅವರನ್ನು ತಳ್ಳಿದಾಗ, ಗುಂಡು ಅವರ ಪಕ್ಕದಲ್ಲಿಯೇ ಹಾದುಹೋಯಿತೆಂದು ತಮ್ಮ ಸ್ನೇಹಿತರಿಗೆ ಹೇಳುತ್ತಿದ್ದುದು ತಮ್ಮ ಕಿವಿಯಲ್ಲಿ ಇನ್ನೂ ಹಾಗೇ ಇದೆಯೆಂದು ಅವರ ಹಿರಿಯ ಪುತ್ರ ಪತ್ರಕರ್ತ ಎ. ವಿಜಯಕುಮಾರ್ ಹೆಮ್ಮೆಯಿಂದ ಹೇಳುತ್ತಾರೆ. ಅವರ ಜೀವಿತ ಕಾಲದಲ್ಲಿ ಪೈಲ್ವಾನ್ ನಂಜಪ್ಪ, ವಾಸುದೇವರಾವ್, ಮಹದೇವಪ್ಪ

ಮುಂತಾದವರು ಕೂನಬೇವು ಗ್ರಾಮಕ್ಕೆ ಬಂದು ಹೋಗುತ್ತಿದ್ದುದನ್ನು ಈಗಲೂ ಕೆಲವರು ನೆನಪಿಸಿಕೊಳ್ಳುತ್ತಾರೆ

ಈ ರೀತಿ ಚಿತ್ರದುರ್ಗದ ಧೀರ ಜನತೆ ತನ್ನ ಕಾಣಿಕೆಯನ್ನು ದೇಶಕ್ಕೆ ಸಲ್ಲಿಸಿದೆ. ಆ ಎಲ್ಲ ಜನರ ತ್ಯಾಗ ಬಲಿದಾನದ ಈ ಸ್ಮರಣೀಯ ಘಟನೆಗಳನ್ನು ಸ್ವಾತಂತ್ರ್ಯದ ಆನಂದವನ್ನು ಅನುಭವಿಸುತ್ತಿರುವ ನಾವು ಮತ್ತೆ ಮತ್ತೆ ನಮ್ಮ ಮುಂದಿನ ಪೀಳಿಗೆಗೆ ನೆನಪಿಗೆ ತರುವಂತೆ, ಹಿಂದಿನವರ ನಿಸ್ವಾರ್ಥ ದೇಶಪ್ರೇಮ, ನಿಷ್ಠೆ, ಮುಂತಾದ ಗುಣಗಳು ನಮ್ಮ ಬದುಕಿಗೆ ಮಾರ್ಗದರ್ಶಕವಾಗುವಂತೆ ಕಾರ್ಯಕ್ರಮಗಳ ಮೂಲಕ ಅವರು ಸದಾ ಪ್ರಾತಃಸ್ಮರಣೀಯರಾಗುವಂತೆ ಮಾಡಬೇಕಾಗಿದೆ.

❑

# ಅನುಬಂಧ – ೧

**(ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸುತ್ತಿದ್ದ ಅಂದಿನ ವಿದ್ಯಾರ್ಥಿಗಳ ಮನಃಸ್ಥಿತಿಯನ್ನು ಬಿಂಬಿಸುವ ಒಂದು ಅಪರೂಪದ ಈ ಪತ್ರ, ಬಾಲಕ ಅನ್ನದಾನಿ ವೀರಭದ್ರಪ್ಪ ತಮ್ಮ ಕುಟುಂಬದ ಹಿರಿಯ ಆಪ್ತರೊಬ್ಬರಿಗೆ ಬರೆದದ್ದು)**

ಕ್ಷೇಮ ಶ್ರೀ ಚಿತ್ರದುರ್ಗದಿಂದ

ತಾ. ೩–೨–೪೨

ಮ। ರಾ। ಶ್ರೀ। ತಿಪ್ಪೇಸ್ವಾಮಣ್ಣನವರ ಸನ್ನಿಧಿಗೆ ಬಾಲಕ ವೀರಭದ್ರನು ಮಾಡುವ ನಮಸ್ಕಾರಗಳು.

ತಮ್ಮಗಳ ಹಸ್ತದಿಂದ ಬರೆಯಲ್ಪಟ್ಟಿದ್ದ ನನ್ನ ಮೇಲಿನ ವಿಷಯವನ್ನು ಒಳಗೊಂಡಿದ್ದ ಕಾಗದವು ತಾ. ೩–೨–೪೨ರಲ್ಲಿ ತಲುಪಿತು. ತಾವುಗಳು ನನ್ನ ಮೇಲೆ ಬರಲಿರುವ ವಿದ್ಯಾರ್ಥಿತನದ ಕಷ್ಟಗಳನ್ನು ಮನನ ಮಾಡಿಕೊಂಡಿರುವುರೆಂದು ನನಗೆ ಮನವರಿಕೆಯಾಯಿತು. ತಾವುಗಳು ಈ ಕೆಳಕಂಡ ವಿಷಯವನ್ನು ನಮ್ಮ ತಾಯಿಯವರಿಗೆ ಸರಿಯಾಗಿ ವಿಶದವಾಗಿ ತಿಳಿಸುವಿರೆಂದು ನಾನು ತಿಳಿದಿರುತ್ತೇನೆ.

ನಾನು ೨೬ನೆಯ ತಾರೀಖಿನ ದಿವಸ ಸ್ವಾತಂತ್ರ್ಯ ದಿನಾಚರಣೆಯಲ್ಲಿ ನಮ್ಮ ಸ್ಕೂಲಿನ ಒಬ್ಬ ಮುಖ್ಯಪಾತ್ರಧಾರಿಯಾಗಿದ್ದದು ನಿಜ. ಮತ್ತು ಆ ದಿವಸ ನಡೆದ ಬಹಿರಂಗ ಸಭೆಯಲ್ಲಿ ನಾನು ನಮ್ಮ ಪಾಠಶಾಲೆಯ ಪರವಾಗಿ ಭಾಷಣ ಮಾಡಿದುದೂ ಸಹ ನಿಜ. ನಾನು ಸ್ವಾತಂತ್ರ್ಯ ದಿನಾಚರಣೆಯಲ್ಲಿ ಭಾಗವಹಿಸಿದುದು ನನಗೆ ಅಷ್ಟೇನು ತಪ್ಪಲ್ಲವೆಂದು ಭಾವನೆ ಉಂಟಾಗಿತ್ತು. ಆದರೆ ನನ್ನ ಭಾವನೆಯು ಹೀಗಿರುವಾಗ ತಮ್ಮಗಳ ಭಾವನೆಯು ಯಾವ ರೀತಿಯಾಗಿ ಇರುವುದೆಂದು

ತಿಳಿಯಲು ಇಚ್ಛಯಿಸುವೆನು. ನನ್ನಂತೆಯೇ ಇನ್ನೂ ಕೆಲವು ವಿದ್ಯಾರ್ಥಿಗಳು ಆ ದಿವಸ ಮುಂದಾಳುಗಳಾಗಿ ಬಂದು ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಿದರು.

ನಮ್ಮನ್ನು ಶಿಕ್ಷೆಗೆ ಗುರಿಪಡಿಸಬೇಕಾಗಿದ್ದರೆ ಎಲ್ಲರನ್ನೂ ಒಟ್ಟಿಗೆ ಶಿಕ್ಷೆಗೆ ಗುರಿಪಡಿಸಬೇಕಾಗಿತ್ತು. ಆದರೆ ನನ್ನೊಬ್ಬನನ್ನೇ ತಾವುಗಳು ತಿಳಿದುಕೊಂಡಿರುವ ಹಾಗೆ ಡಿಬಾರ್‌ನ ಶಿಕ್ಷೆಗೆ ಗುರಿಪಡಿಸುವುದು ಸೂಕ್ತವಾಗಿಲ್ಲ. ಆದುದರಿಂದ ನನ್ನೊಬ್ಬನನ್ನೇ ವಿದ್ಯಾಧಿಕಾರಿಗಳು ಡಿಬಾರ್ ಮಾಡಿರಲಾರರೆಂದು ನನಗೆ ಅನ್ನಿಸುತ್ತದೆ.

ಆದರೆ ನಾನೊಬ್ಬನೇ ಆ ದಿವಸದ ಸಂಜೆಯ ಬಹಿರಂಗ ಸಭೆಯಲ್ಲಿ ಭಾಷಣದಲ್ಲಿ ಭಾಗವಹಿಸಿದವನು. ಇದೂ ಅಲ್ಲದೆ ನನ್ನ ಆ ಭಾಷಣವು ಅನೇಕ ಕಾರಣಗಳಿಂದ ಸರ್ಕಾರಕ್ಕೆ ವಿರೋಧವಾಗಿತ್ತೆಂದು ನನಗೆ ಭಾಸವಾಗುತ್ತೆ. ಆದುದರಿಂದ ಸರ್ಕಾರದವರು ನನ್ನನು ದಸ್ತಿಗಿರಿ ಮಾಡಬಹುದೇ ಹೊರತು, ವಿದ್ಯಾಧಿಕಾರಿಗಳು ಯಾವ ವಿಧವಾದ ಶಿಕ್ಷೆಯನ್ನೂ ನನಗೆ ವಿಧಿಸಿರುವುದು ಸುಳ್ಳು.

ಆದುದರಿಂದ ನೀವು ಕೇಳಿದ ಹಾಗೆ ೨ ವರ್ಷಗಳು ನನ್ನನು ಸ್ಕೂಲಿನಿಂದ ಡಿಬಾರ್ ಮಾಡಿರುವರೆಂಬುದನ್ನು ನಾನು ನಿಮ್ಮಿಂದ ತಿಳಿದುಕೊಂಡ ಹಾಗಾಯಿತು. ಅದು ಯಾರಿಂದ ಯಾವ ರೀತಿಯಲ್ಲಿ ತಮಗೆ ತಿಳಿಯಬಂತೋ ನನಗಂತೂ ತಿಳಿಯದು. ದಯವಿಟ್ಟು ತಮಗೆ ತಿಳಿದುಬಂದ ರೀತಿಯನ್ನು ತಿಳಿಸುವಿರೆಂದು ನಂಬಿದ್ದೇನೆ.

ನನ್ನ ಮೇಲೆ ಉಪಾಧ್ಯಾಯರುಗಳು ಬಹಳ ವಕ್ರದೃಷ್ಟಿಯನ್ನು ಉಳ್ಳವರಾಗಿದ್ದಾರೆ. ಇದಕ್ಕೆ ಕಾರಣ ನಾನು ಅವರಿಗೆ ಅನೇಕ ವಿಷಯಗಳಲ್ಲಿ ವಿರುದ್ಧವಾಗಿರುವುದೇ ಇವರ ವಕ್ರ ದೃಷ್ಟಿಗೆ ಕಾರಣವಾಯಿತೆಂದು ಕಂಡುಬರುತ್ತೆ. ಆದರೆ ನಾನು ಅವರಿಗೆ ವಿರುದ್ಧವಾಗಿದ್ದರೂ ಕೂಡ ವಿದ್ಯಾರ್ಥಿಯತ್ವ ನಿಯಮಕ್ಕೆ ಕಾನೂನುಗಳಿಗೆ ಮತ್ತು ನ್ಯಾಯಕ್ಕೆ ವಿರೋಧವಾಗಿಲ್ಲ.

ನನಗೆ ಈ ಸಂದರ್ಭದಲ್ಲಿ ಯಾವ ತರಹ ಶಿಕ್ಷೆಯು ಯಾರಿಂದ ಯಾವಾಗ ವಿಧಿಸಲ್ಪಡುತ್ತೆಯೋ ನನಗೆ ತಿಳಿಯದು. ನಾನು ಯಾವ ತರಹ ಶಿಕ್ಷೆಗಳು ಒದಗಿದರೂ ಅವಗಳನ್ನು ಎದುರಿಸಲು ಸಿದ್ಧನಿರುವೆನು. ನಾನು ಇಲ್ಲಿಗೆ



ಏತಕ್ಕೋಸ್ಕರ ಬಂದಿರುವನೆಂಬುದನ್ನು ಚನ್ನಾಗಿ ತಿಳಿದುಕೊಂಡು ನನ್ನ ಕರ್ತವ್ಯವನ್ನು ಚನ್ನಾಗಿಯೇ ಮಾಡುತ್ತಿರುವೆನು. ನಾನು ನನಗೆ ಉಂಟಾಗಬಹುದಾದ ಯಾವ ವಿಧವಾದ ಭಯವನ್ನು ಉಂಟುಮಾಡುವ ಶಿಕ್ಷೆಗಳಿಂದ ಹೆದರಿ ಜಿಗುಪ್ಸೆಯನ್ನು ಹೊಂದುತ್ತಿಲ್ಲ. ಈ ವರುಷದ ಪರೀಕ್ಷೆಯನ್ನು ಪಾಸ್ ಮಾಡುವ ಯೋಗ್ಯತೆ ನನಗೆ ಧಾರಾಳವಾಗಿ ಇದೆ. ಆದರೆ ನಮ್ಮ ಉಪಾಧ್ಯಾಯರುಗಳ ವಕ್ರ ದೃಷ್ಟಿಯು ನನ್ನ ಮೇಲೆ ಯಾವ ರೀತಿಯ ಪರಿಣಾಮವನ್ನು ಉಂಟುಮಾಡುವುದೋ ಎನ್ನಿಸುತ್ತದೆ.

ಆದರೂ ಕೂಡ ನಾನು ನನ್ನ ಪಾಠ ಪ್ರವಚನಗಳನ್ನು ಪರೀಕ್ಷೆಯು ಸಮೀಪಿಸಿದ್ದರಿಂದ ಕಷ್ಟಪಟ್ಟು ಅಭ್ಯಾಸ ಮಾಡುತ್ತಿರುವೆನು. ನಾನು ಸದಾ ಧೈರ್ಯವಾಗಿಯೇ ಇರುವೆನು. ತಾವುಗಳು ನನಗೆ ಕೊಟ್ಟ ಧೈರ್ಯವು ನನ್ನ ಧೈರ್ಯವನ್ನು ಇಮ್ಮಡಿ ಮಾಡಿತು.

ನಾನು ಮಾಡಿದ ಕೆಲಸಗಳಿಂದ ತಮ್ಮ ಮನಸ್ಸು ವ್ಯಥೆಯನ್ನು ಹೊಂದಿರಬಹುದು. ಆ ವ್ಯಥೆಯನ್ನು ಉಂಟು ಮಾಡಿದ ನನ್ನನ್ನು ಕ್ಷಮಿಸಬೇಕಾಗಿ ಬೇಡುತ್ತೇನೆ.

ನಾನು ಊರಿಗೆ ಬರಬೇಕಾದ ಸಂದರ್ಭವಿಲ್ಲ. ಪರೀಕ್ಷೆಯನ್ನು ಮುಗಿಸಿಕೊಂಡು ನನ್ನ ಕರ್ತವ್ಯದಿಂದ ಕೃತಕೃತ್ಯನಾಗಿಯೇ ಬರುವೆನು.

ನಾನು ಇಲ್ಲಿಯವರಿಗೆ ನನ್ನ ವಿಷಯವನ್ನು ತಿಳಿಸದೇ ಇದ್ದುದನ್ನು ಮನ್ನಿಸಿ.

ಇಂತಿ ನಮಸ್ಕಾರಗಳು

**A. R. Veerabhadrappa**

Anantha Setti Hostle

Chitaldrug

## ಆಧಾರಸೂಚಿ


೧) ಕನ್ನಡ ವಿಷಯ ವಿಶ್ವಕೋಶ– ಕರ್ನಾಟಕ ಸಂಪುಟ,
ಕನ್ನಡ ಅಧ್ಯಯನ ಸಂಸ್ಥೆ, ಮೈವಿವಿ, ಮೈಸೂರು ೧೯೭೯.

೨) ಚಂದ್ರವಳ್ಳಿ – (ಚಿತ್ರದುರ್ಗ ಜಿಲ್ಲೆಯ ಇತಿಹಾಸ ಕುರಿತ ಲೇಖನಗಳು),
ಸಂ : ಡಾ. ಎಂ. ವಿ. ಶ್ರೀನಿವಾಸ್, ಲಕ್ಷ್ಮಣ್ ತೆಲಗಾವಿ,
ಜಿಲ್ಲಾ ಇತಿಹಾಸ ಸಂಶೋಧನ ಮಂಡಳಿ, ಚಿತ್ರದುರ್ಗ, ೧೯೭೬.

೩) ಚಿತ್ರದುರ್ಗ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ತ್ವ,
ಸಂ : ಡಾ. ಆರ್. ಗೋಪಾಲ್,
ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ,
ಹೊಸಪೇಟೆ, ೨೦೦೫.

೪) ರಾಷ್ಟ್ರ ನೇತಾರ – ಎಸ್. ನಿಜಲಿಂಗಪ್ಪನವರ ಜನ್ಮ ಶತಮಾನೋತ್ಸವ ಸ್ಮರಣ ಸಂಪುಟ,
ಸಂ : ಪ್ರೊ. ಎಚ್. ಶ್ರೀಶೈಲ ಆರಾಧ್ಯ ಮತ್ತು ಇತರರು,
ಚಿತ್ರದುರ್ಗ, ೨೦೦೨.

೫) ಹುಲ್ಲೂರು ಶ್ರೀನಿವಾಸ ಜೋಯಿಸರು,
ಡಾ. ಬಿ. ರಾಜಶೇಖರಪ್ಪ,
ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೮.

೬) ಗತ ಬಿಂಬ (ಸಂಶೋಧನ ಲೇಖನಗಳು),
ಪ್ರೊ. ಪಿ. ಯಶೋದಾ ರಾಜಶೇಖರಪ್ಪ,
ಸಿವಿಜಿ ಇಂಡಿಯಾ, ಬೆಂಗಳೂರು, ೨೦೧೫.

೭) ಸೋಮಣ್ಣನ 'ಸ್ಟಾಕ್'ನಿಂದ,
ಎಚ್. ಜಿ. ಸೋಮಶೇಖರರಾವ್,
ಪ್ರ: ತಾ. ರಾ. ನಾಗರಾಜ್, ಬೆಂಗಳೂರು, ೨೦೦೧.

೮) ಅಮೃತಶ್ರೀ – ಶ್ರೀ ಎನ್. ತಿಪ್ಪಣ್ಣನವರ ಅಭಿನಂದನ ಗ್ರಂಥ,
ಸಂ : ಎಂ. ಆರ್. ವಿಶ್ವನಾಥರೆಡ್ಡಿ ಮತ್ತು ಇತರರು,
ಬಳ್ಳಾರಿ, ೨೦೧೫.

೯) ಸಾತ್ವಿಕ – (ತುರುವನೂರು ಇಂದ್ರಣ್ಣಗೌಡರ ಜೀವನಗಾಥೆ),
ಸಂ : ಬಿ. ಆರ್. ಪೊಲೀಸ್ ಪಾಟೀಲ,
ವಾತ್ಸಲ್ಯ ಪ್ರಕಾಶನ, ಬನಹಟ್ಟಿ, ೨೦೧೫.

೧೦) ಕರ್ನಾಟಕದ ಸ್ವಾತಂತ್ರ್ಯ ಹೋರಾಟಗಾರರು – ಪ್ರಥಮ ಸಂಪುಟ,
ಕರ್ನಾಟಕ ರಾಜ್ಯ ಸರ್ಕಾರದ ಪ್ರಕಟಣೆ, ೧೯೭೫.

೧೧) ಎ. ಭೀಮಪ್ಪ ನಾಯಕ,
ಜಿ. ಎಸ್. ಉಜ್ಜಿನಪ್ಪ,
ಪ್ರಸಾರಾಂಗ, ಬೆಂವಿವಿ, ಬೆಂಗಳೂರು, ೨೦೦೬.

೧೨) ನನ್ನ ಜೀವನ ಮತ್ತು ರಾಜಕೀಯ – ಎಸ್. ನಿಜಲಿಂಗಪ್ಪ (ಆತ್ಮಕಥನ),
ಅನುವಾದ : ಎಂ. ಪಿ. ಪ್ರಕಾಶ್, ಬೆಂಗಳೂರು, ೨೦೦೪.

೧೩) ಸ್ವಾತಂತ್ರ ಸಂಗ್ರಾಮದ ಸ್ಮೃತಿಗಳು,
ಸಂ : ಸೂರ್ಯನಾಥ ಕಾಮತ್,
ಸಂಪುಟ ಎರಡು, ಬೆಂಗಳೂರು, ೧೯೭೭,
ಗೀತಾ ಬುಕ್‌ಹೌಸ್, ಮೈಸೂರು, ೧೯೭೪, ೧೯೭೫,

೧೪) ಹಿಂದಣ ಹೆಜ್ಜೆ,
ಯಶೋದಾ ರಾಜಶೇಖರಪ್ಪ,
ಸಿವಿಜಿ ಇಂಡಿಯಾ, ಬೆಂಗಳೂರು, ೨೦೧೧.

೧೫) Women Freedom Fighters in Karnataka,
Sarojini Shintri, K. Raghavendra Rao,
Prasaranga, Karnataka University, Dharwad, 1983

೧೬) ತ.ರಾ.ಸು.–ಬದುಕು ಬರೆಹ; ಸಂ: ಶಾ. ಮಂ. ಕೃಷ್ಣರಾಯ,
ಹೇಮಂತ ಸಾಹಿತ್ಯ, ಬೆಂಗಳೂರು, ೨೦೦೮.

೧೭) ಸಾಧಕ ಸಂಪದ, ಪ್ರೊ. ಬಿ. ರಾಜಶೇಖರಪ್ಪ,
ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು, ೨೦೨೦.

## ಸಹಕಾರ

ಶ್ರೀ ಸತ್ಯನಾರಾಯಣರೆಡ್ಡಿ, ತುರುವನೂರು

ಶ್ರೀ ವಿವೇಕಾನಂದ, ತುರುವನೂರು

ಶ್ರೀ ಎನ್. ಭೀಮಪ್ಪ (ನಿವೃತ್ತ ಅಧ್ಯಾಪಕರು), ಕೂನಬೇವು

ಶ್ರೀಮತಿ ಎಚ್. ಎಸ್. ಜ್ಯೋತಿ, ಜಿ. ಪಂ., ಚಿತ್ರದುರ್ಗ (ದಿ. ಚಿದಾನಂದಪ್ಪನವರ ಸೊಸೆ)

ಶ್ರೀ ಟಿ. ಎಚ್. ವೀರೇಶ್, ದಾವಣಗೆರೆ

ಶ್ರೀ ವೈ. ರಾಜಣ್ಣ ಬಿನ್ ಯರ್ರಪ್ಪ, ತುರುವನೂರು

ಶ್ರೀ ಎ. ವಿಜಯಕುಮಾರ್, ಕೂನಬೇವು

ಶ್ರೀ ಎ. ವಿ. ನುಂಕಪ್ಪ, ಚಿತ್ರದುರ್ಗ

ಡಾ. ಬಿ. ನಂಜುಂಡಸ್ವಾಮಿ, ತುಮಕೂರು

ಶ್ರೀ ಜಿ. ಎನ್. ಬಸವರಾಜಪ್ಪ, ಆರ್. ನುಲೇನೂರು

ಶ್ರೀ ಶರಣಪ್ಪ, ಆರ್. ನುಲೇನೂರು

ಶ್ರೀ ನಿಶಾಂತ್ ರಂಗಾರೆಡ್ಡಿ, ಚಿತ್ರದುರ್ಗ

❑

# ಅನುಬಂಧ – ೨

## ಛಾಯಾಚಿತ್ರಗಳು



ಸ್ವಾತಂತ್ರ್ಯ ಹೋರಾಟಗಾರರು ಸೇರುತ್ತಿದ್ದ ಶ್ರೀ ನೀಲಕಂಠೇಶ್ವರ ದೇವಸ್ಥಾನ, ಚಿತ್ರದುರ್ಗ



ಪೈಲ್ವಾನ್ ನಂಜಪ್ಪ ಧ್ವಜಾರೋಹಣ ಮಾಡಿದ ಚಿತ್ರದುರ್ಗ ತಾಲ್ಲೂಕು ಕಛೇರಿ




ಜಯದೇವ ಮಹಾಸ್ವಾಮಿಗಳು ಮತ್ತು ಮಹಾತ್ಮ ಗಾಂಧೀಜಿ ಭೇಟಿ (೧೯೩೪)




ಶ್ರೀಮತಿ ವೆಂಕಮ್ಮ ಮತ್ತು ಶ್ರೀ ಹರಿಹರ ಗುಂಡೂರಾವ್






ಎಸ್. ನಿಜಲಿಂಗಪ್ಪನವರು



ಹುಲ್ಲೂರು ಶ್ರೀನಿವಾಸ ಜೋಯಿಸರು




ಎ. ಭೀಮಪ್ಪ ನಾಯಕ




ಬಳ್ಳಾರಿ ಸಿದ್ದಮ್ಮ





ಡಿ.ಎಸ್. ಚಿದಾನಂದಪ್ಪ




ಪಿ. ಸೀತಾರಾಮರೆಡ್ಡಿ



ಪೈಲ್ವಾನ್ ನಂಜಪ್ಪ



ಹುತಾತ್ಮ ಎಂ.ಬಿ. ಸಿದ್ಧಬಸಪ್ಪ (ಆರ್) ನುಲೇನೂರು




ಜಿ. ಟಿ. ಸ್ವಾಮಿ (ಗೌಡರ)


ದೊಂಟ್ಲು ಹನುಮಂತರೆಡ್ಡಿ


ಬುಡೇನ್ ಸಾಬ್ (ಬುಡ್ಡಪ್ಪ)



ಲಕ್ಷ್ಮಣ ರೆಡ್ಡಿ


ಅನ್ನದಾನಿ ವೀರಭದ್ರಪ್ಪ


ಎನ್.ಪಿ. ಈಶ್ವರಪ್ಪ ಪಟೇಲ್ (ಆರ್) ನುಲೇನೂರು


ಅಲ್ಲಾಡಿ ಸಿದ್ದಪ್ಪ (ಕೂನಬೇವು)



ಎ. ಕೆ. ಯರ್ರಪ್ಪ


ಬಂಡ್ಲ ಗೋವಿಂದರೆಡ್ಡಿ


ಮಹಮ್ಮದ್ ಜಾಫರ್




ಗೌಡರ ಹನುಮಕ್ಕ


ಶ್ರೀರೆಡ್ಡಿ ಗೋವಿಂದರೆಡ್ಡಿ (ಲವಣಿ)



ಪಿ. ನಾರಾಯಣರೆಡ್ಡಿ


ಸಾನಿಕಂ ಗೋವಿಂದರೆಡ್ಡಿ


ಬಿ. ಕೆ. ಹನುಮಂತರೆಡ್ಡಿ


ಮಾಜಿ ಹನುಮಂತಪ್ಪ


ವಿ. ಗೋವಿಂದಪ್ಪ


ಎಸ್. ತಿಮ್ಮರೆಡ್ಡಿ


ಕೆ.ಎಲ್. ತಿಪ್ಪೇಸ್ವಾಮಿ



ಸಾದಾ ಕೃಷ್ಣಾರೆಡ್ಡಿ



ಸಾನಿಕಂ ಈರಮ್ಮ



ಎನ್. ವಿರುಪಣ್ಣ





ಬಳ್ಳಾರಿ ಸಿದ್ದಮ್ಮ ಸ್ಮಾರಕ, ದಾವಣಗೆರೆ



ಗಾಂಧಿ ಸ್ಮಾರಕ, ತುರುವನೂರು





ಶಿವಪುರ ಧ್ವಜ ಸತ್ಯಾಗ್ರಹದಲ್ಲಿ ಬಳ್ಳಾರಿ ಸಿದ್ದಮ್ಮ ಮತ್ತು ಇತರರು



ಎಸ್ಸೆನ್ ಅವರ ಜೊತೆಗೆ ಅಂದಿನ ಕಾಂಗ್ರೆಸ್ ಕಾರ್ಯಕರ್ತರು



ಅರಣ್ಯ ಚಳುವಳಿ ನಡೆದ ಈಚಲು ವನವಿದ್ದ  ಜಾಗ 1



ಅರಣ್ಯ ಚಳುವಳಿ ನಡೆದ ಈಚಲು ವನವಿದ್ದ ಜಾಗ 2





ಗಾಂಧಿ ಸ್ಮಾರಕ, ತುರುವನೂರು



ಸ್ವಾತಂತ್ರ್ಯ ಹೋರಾಟಗಾರರ ಸ್ಮಾರಕ ಭವನ, ಚಿತ್ರದುರ್ಗ




ಸ್ವಾತಂತ್ರ್ಯ ಹೋರಾಟಗಾರರೊಬ್ಬರಿಗೆ ನೀಡಿದ ಒಂದು ತಾಮ್ರಪತ್ರ




ಸ್ವಾತಂತ್ರ್ಯ ಹೋರಾಟಗಾರರಿಗೆ ನೀಡಿದ ಒಂದು ಅಭಿನಂದನ ಪತ್ರ

## ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ
## ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

| ಕ್ರಸಂ. | ಪುಸ್ತಕದ ಹೆಸರು | ಲೇಖಕರ ಹೆಸರು | ಬೆಲೆ |
|---|---|---|---|
| ೧. | ತುರುವನೂರು | ಡಾ. ಪಿ. ಯಶೋದಾ ರಾಜಶೇಖರಪ್ಪ | ೩೦/– |
| ೨. | ಚಿತ್ರದುರ್ಗ | ಡಾ. ಬಿ. ರಾಜಶೇಖರಪ್ಪ | ೩೦/– |
| ೩. | ರಾಮಸ್ವಾಮಿ ವೃತ್ತ | ಮಂಜುನಾಥ ಹೆಚ್.ಎಲ್. | ೩೦/– |
| ೪. | ಸುಬ್ಬರಾಯನ ಕೆರೆ | ಡಾ. ಇಂದಿರಾ ಬಿ.ಪಿ. | ೩೦/– |
| ೫. | ಬದನವಾಳು | ಡಾ. ಇಂದಿರಾ ಬಿ.ಪಿ. | ೩೦/– |
| ೬. | ತಗಡೂರು | ಡಾ. ಹೆಚ್.ಎಸ್. ಉಷಾರಾಣಿ | ೩೦/– |
| ೭. | ಶಿವಪುರ | ಡಾ. ಲಿಂಗರಾಜು | ೩೦/– |
| ೮. | ಮಂಡ್ಯ | ಡಾ. ಶಿವರಾಮು ಎಸ್. | ೩೦/– |
| ೯. | ಚಾಮರಾಜನಗರ | ಡಾ. ಸುಂದ್ರೇಶ ಎನ್. | ೩೦/– |
| ೧೦. | ಗುಂಡ್ಲುಪೇಟೆ | ಕವಿತಾ ಎ. | ೩೦/– |
| ೧೧. | ಗೊರೂರು | ಡಾ. ಯೋಗೇಶ್ ಎನ್.ಇ. | ೩೦/– |
| ೧೨. | ಅರಸೀಕೆರೆ | ಡಾ. ಮಂಜುನಾಥ ಜಿ.ಆರ್. | ೩೦/– |
| ೧೩. | ಹೊಸರಿತ್ತಿ | ಡಾ. ಹೇಮಪ್ಪ ಬ. ಕೆಂಚಳ್ಳಿ | ೩೦/– |
| ೧೪. | ಕನ್ನೇಶ್ವರ | ಡಾ. ಚಾಮರಾಜ ಕಮ್ಮಾರ | ೩೦/– |
| ೧೫. | ಚಳ್ಳಕೂಡ್ಲೂರು | ರಾಮಣ್ಣ ಹವಳೆ | ೩೦/– |
| ೧೬. | ನ್ಯಾಷನಲ್ ಹೈಸ್ಕೂಲು | ಟಿ.ಕೆ. ತಿಮ್ಮರಾಜ ಶೆಟ್ಟಿ | ೩೦/– |

| | | | |
|---|---|---|---|
| ೧೭. | ಬನಪ್ಪ ಪಾರ್ಕ್ | ರಮೇಶ ದೊಡ್ಡಪುರ | ೩೦/– |
| ೧೮. | ಮಲ್ಲೇಶ್ವರ | ಕೆ.ಎಲ್. ನಟರಾಜ್ | ೩೦/– |
| ೧೯. | ದಂಡುಪ್ರದೇಶ | ಪ್ರಮೋದ್ ನ. ಗೋ. | ೩೦/– |
| ೨೦. | ದೇವನಹಳ್ಳಿ | ಕೆ.ಆರ್. ನರಸಿಂಹನ್ | ೩೦/– |
| ೨೧. | ದೊಡ್ಡಬಳ್ಳಾಪುರ | ಡಿ.ಎಂ. ಘನಶ್ಯಾಮ | ೩೦/– |
| ೨೨. | ರಾಮನಗರ | ಎಸ್. ಶರತ್ ಚಂದ್ರ | ೩೦/– |
| ೨೩. | ಕನಕಪುರ | ಡಾ. ಎಸ್.ಎಚ್. ಭುವನೇಶ್ವರ | ೩೦/– |
| ೨೪. | ಶ್ರೀನಿವಾಸಪುರ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೫. | ಬಂಗಾರಪೇಟೆ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೬. | ವಿದುರಾಶ್ವತ್ಥ | ಡಾ. ಎಸ್.ಜಿ. ರಾಮದಾಸ ರೆಡ್ಡಿ | ೩೦/– |
| ೨೭. | ಈಸೂರು | ಮಾರ್ಪಳ್ಳಿ ಆರ್. ಮಂಜುನಾಥ್ | ೩೦/– |
| ೨೮. | ನಗರ(ಬಿದನೂರು) | ಚಿನ್ಮಯ ಎಂ.ಸಿ. | ೩೦/– |
| ೨೯. | ಚನ್ನಗಿರಿ | ಡಾ. ಕೆಳದಿ ವೆಂಕಟೇಶ ಜೋಯಿಸ್ | ೩೦/– |
| ೩೦. | ದಾವಣಗೆರೆ | ಸಹನಾ ಚೇತನ್ | ೩೦/– |
| ೩೧. | ಸಿಂದಗಿ | ಡಾ. ರಮೇಶ ಎಸ್. ಕತ್ತಿ | ೩೦/– |
| ೩೨. | ಮಸಬಿನಾಳ | ಶಂಕರ ಬೈಚಬಾಳ | ೩೦/– |
| ೩೩. | ಸಾರವಾಡ | ಡಾ. ಸೋಮಶೇಖರ ವಾಲಿ | ೩೦/– |
| ೩೪. | ಹಲಸಂಗಿ | ಶ್ರೀ ಸುಮಿತ್ ಮೇತ್ರಿ | ೩೦/– |



| | | | |
|---|---|---|---|
| ೩೫. | ನರಗುಂದ | ಡಾ. ನಿಂಗು ಸೊಲಗಿ | ೩೦/– |
| ೩೬. | ಮುಂಡರಗಿ | ಡಾ. ಉಮೇಶ ತಿಮ್ಮಾಪುರ | ೩೦/– |
| ೩೭. | ಹಲಗಲಿ | ಡಾ. ವಿಜಯಶ್ರೀ ಇಟ್ಟಣ್ಣವರ | ೩೦/– |
| ೩೮. | ಬಿಸನಾಳ | ಡಾ. ವಿನಯಕುಮಾರ್ ಹಿರೇಮಠ | ೩೦/– |
| ೩೯. | ಬಾಗಲಕೋಟೆ | ರಾಮ ಮನಗೂಳಿ | ೩೦/– |
| ೪೦. | ಬಾದಾಮಿ | ಡಾ. ಪ್ರಕಾಶ ಗ. ಖಾಡೆ | ೩೦/– |
| ೪೧. | ಸುರಪುರ | ಶ್ರೀನಿವಾಸ ಜಾಲವಾದಿ | ೩೦/– |
| ೪೨. | ಕೆಂಭಾವಿ | ನಿಂಗನಗೌಡ ಹ. ದೇಸಾಯಿ | ೩೦/– |
| ೪೩. | ರಾಜನಕೋಳೂರು | ರಾಘವೇಂದ್ರ ಜಹಗೀರದಾರ | ೩೦/– |
| ೪೪. | ಭಾಲ್ಕಿ | ಡಾ. ರಘುಶಂಖ ಭಾತಂಬ್ರಾ | ೩೦/– |
| ೪೫. | ಗೋರಟಾ | ಷ.ಬ್ರ. ಡಾ. ರಾಜಶೇಖರ ಶಿವಾಚಾರ್ಯ ಸ್ವಾಮಿಗಳು | ೩೦/– |
| ೪೬. | ಕೇಂದ್ರ ಮೈದಾನ | ಡಾ. ವಸಂತಕುಮಾರ್ ಪೆರ್ಲ | ೩೦/– |
| ೪೭. | ರಾಮಶಾಲಾ ಬಯಲು | ರಾಮಣ್ಣ ಹವಳೆ | ೩೦/– |
| ೪೮. | ಉಳ್ಳಾಲ | ಡಾ. ಜ್ಯೋತಿ ಚೇಳ್ಯಾರು | ೩೦/– |
| ೪೯. | ಅಮರಸುಳ್ಯ | ಸಹನಾ ಕಾಂತಬೈಲು | ೩೦/– |
| ೫೦. | ಅಜ್ಜರಕಾಡು ಮೈದಾನ | ಡಾ. ಪೃಥ್ವೀರಾಜ ಕವತ್ತಾರು | ೩೦/– |
| ೫೧. | ಬಸರೂರು–ಕುಂದಾಪುರ | ಮಂಜುನಾಥ್ ಚಾಂದ್ | ೩೦/– |
| ೫೨. | ಪೊನ್ನಂಪೇಟೆ | ಸೊಮೆಯಂಡ ಕೌಸಲ್ಯ ಸತೀಶ್ | ೩೦/– |

| | | | |
|---|---|---|---|
| ೫೩. | ಮಡಿಕೇರಿ | ಪ್ರೊ. ಕೆ.ಆರ್. ದೀಕ್ಷಿತ್ | ೩೦/– |
| ೫೪. | ಅಜ್ಜಂಪುರ | ಜಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೫. | ಚಿಕ್ಕಮಗಳೂರು | ಜಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೬. | ಕಲಬುರಗಿ | ಡಾ. ಶಂಭುಲಿಂಗವಾಣಿ | ೩೦/– |
| ೫೭. | ಮುಧೋಳ–ಸೇಡಂ | ಮುಡಬಿ ಗುಂಡೇರಾವ | ೩೦/– |
| ೫೮. | ಅಂಕೋಲಾ | ಶಾಂತಾರಾಮ ನಾಯಕ | ೩೦/– |
| ೫೯. | ಶಿರಸಿ | ಪದ್ಮಾಕರ ಮಡಗಾಂವಕರ | ೩೦/– |
| ೬೦. | ಕಾರವಾರ | ಡಾ. ಉದಯ ಶಂಕರ ಪುರಾಣಿಕ | ೩೦/– |
| ೬೧. | ಬಳ್ಳಾರಿ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೨. | ಹೊಸಪೇಟೆ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೩. | ಕೊಟ್ಟೂರು | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೪. | ಕೂಡ್ಲಿಗಿ | ಡಾ. ಕೆ. ಸತೀಶ | ೩೦/– |
| ೬೫. | ಕಿತ್ತೂರು | ಪ್ರಕಾಶ ಗಿರಿಮಲ್ಲನವರ | ೩೦/– |
| ೬೬. | ಹುದಲಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೭. | ಬೆಳಗಾವಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೮. | ಹುಲಕುಂದ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೯. | ಬೆಂಗೇರಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೭೦. | ಕೊಪ್ಪಳ | ಮಹೇಶ ಬಳ್ಳಾರಿ | ೩೦/– |



| | | | |
|---|---|---|---|
| ೭೧. | ಗಂಗಾವತಿ | ರಮೇಶ ಸಿ. ಬನ್ನಿಕೊಪ್ಪ | ೩೦/– |
| ೭೨. | ಅಳವಂಡಿ | ಡಾ. ಪ್ರಕಾಶ ಬಳ್ಳಾರಿ | ೩೦/– |
| ೭೩. | ತುಮಕೂರು | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೪. | ಮಧುಗಿರಿ | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೫. | ತಾವರೆಕೆರೆ | ಪ್ರೊ. ಕೆ. ಪುಟ್ಟರಂಗಪ್ಪ | ೩೦/– |